ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ
NIMMURU SUDDI

ಸಂಪಾದಕರು: ಸುಂದರ್
Editor : Sundar

ಏಕ ಕಾಲಕ್ಕೆ
ಬಳ್ಳಾರಿ, ಕೊಪ್ಪಳ, ಯಾದಗಿರಿ, ರಾಯಚೂರು, ಕಲಬುರ್ಗಿ, ಬೀದರ, ವಿಜಯನಗರ ಜಿಲ್ಲೆಗಳಲ್ಲಿ ಪ್ರಕಟ

Volume: 01, Issue: 279 RNI Number : KNKAN/25/A2770 23-10-2026 Friday Page 04, Price 2/- suddinimmuru@gmail.com Mob:-8660146563

ಸಂಪುಟ :01 ಸಂಚಿಕೆ:279 ರಾಯಚೂರು 23-10-2026 ಶುಕ್ರವಾರ ಪುಟ 04 ಬೆಲೆ ರೂ.2/- Postal Reg Number:RCR/L/RNP/117/2026-28

ರಾಯಚೂರು ಮಹಾನಗರ ಪಾಲಿಕೆ ನಾಡಹಬ್ಬ ದಸರಾ ಮಹೋತ್ಸವಕ್ಕೆ ಜಿಲ್ಲಾಧಿಕಾರಿಗಳಿಂದ ಚಾಲನೆ

ರಾಯಚೂರು, ಪ್ರತಿ ವರ್ಷದಂತೆ ಈ ವರ್ಷ ಸಹ ರಾಯಚೂರು ಮಹಾನಗರ ಪಾಲಿಕೆ ವತಿಯಿಂದ ನಾಡ ಹಬ್ಬ ದಸರಾ ವನ್ನು ಆಯೋಜನೆ ಮಾಡಲಾಗಿತ್ತು. ಕಾರ್ಯಕ್ರಮದ ಸಾನಿಧ್ಯ ಶ್ರೀ ಶಾಂತಮಲ್ಲ ಶಿವಾಚಾರ್ಯ ಮಹಾಸ್ವಾಮಿಗಳು 108 ಸಾವಿರ ದೇವರ ಸಂಸ್ಥಾನ ಕಿಲ್ಲೆ ಬ್ರಹನ್ಮ ತ ರಾಯಚೂರು ವಹಿಸಿದ್ದರು.ಶ್ರೀಮತಿ ಪೂವಿತಾ ಎಸ್ ಜಿಲ್ಲಾಧಿಕಾರಿಗಳು ಡೊಳ್ಳು ವಾದ್ಯವನ್ನು ಬಾರಿಸುವುದರ ಮೂಲಕ ಮೆರವಣಿಗೆಗೆ ಚಾಲನೆ ನೀಡಿದರು.



ಮಹಾನಗರ ಪಾಲಿಕೆ ಆಯುಕ್ತರದ ಜುಬಿನ್ ಮೊಹಾ ಪಾತ್ರ ಪೂಜಾ ಕಾರ್ಯಕ್ರಮವನ್ನು ನೆರವೇರಿಸಿದರು. ಪೂಜ್ಯರು ವೇದಿಕೆಯ ಮೇಲಿರುವ ಗಣ್ಯರಿಗೆ ಮತ್ತು ಮಹನೀಯರಿಗೆ ಸಾರ್ವಜನಿಕರಿಗೆ ಬನ್ನಿಯನ್ನು ಕೊಡುವುದರ ಮೂಲಕ ಶುಭಕಾಮನೆಗಳನ್ನು ಹಂಚಿಕೊಂಡರು.

ಈ ಸಂದರ್ಭದಲ್ಲಿ.ಎನ್ ಆರ್ ಮುರುಳಿಧರ್ ಉಪಾಯುಕ್ತರು ರಾಯಚೂರು ಮಹಾನಗರ ಪಾಲಿಕೆ ಆಡಳಿತ ವಿಭಾಗ.ಎನ್ ಭರತ್ ಕುಮಾರ್ ಉಪಾಯುಕ್ತರು ಅಭಿವೃದ್ಧಿ ವಿಭಾಗ.ಜಯಪಾಲ್ ರೆಡ್ಡಿ ವಲಯ ಆರಯುಕ್ತರು ಭಾಗ-1. ಶಂಶಾಲಮ್ ಎನ್ ಕಂದಾಯ ಅಧಿಕಾರಿ ವಲಯ 1.ಶ್ರೀಕೃಷ್ಣ ಶಾವಂತ ಗೇರಾ ಕಂದಾಯ ವಿಭಾಗದ ಆಡಳಿತ ಅಧಿಕಾರಿಗಳು. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಸಹ ಕಾರ್ಯ ದರ್ಶಿ, ಡಾ ದಂಡಪ್ಪ ಬಿರಾದಾರ ಮಹಾನಗರ ಪಾಲಿಕೆಯ ಸಮುದಾಯ ವಿಭಾಗದ ಕಟ್ಟಿಮನಿ ವ್ಯವಸ್ಥಾಪಕರಾದ ರಾಜು ರಾಯಚೂರು ಮಹಾನಗರ ಪಾಲಿಕೆಯ ಸಿಬ್ಬಂದಿ ಹಾಗೂ ಸಾರ್ವಜನಿಕರು ಹಾಗೂ ವಿವಿಧ ಕಲಾತಂಡಗಳು ಇನ್ನಿತರರು ಭಾಗವಹಿಸಿದ್ದರು

ವಿಜಿರಾಮ್ ಜೀ ಯೋಜನೆ: ಕೂಲಿ ಪಾವತಿಯಲ್ಲಿ ಅನ್ಯಾಯ ಕ್ರಮಕ್ಕೆ ಒತ್ತಾಯ



ರಾಯಚೂರು,ಅ.22-

ವಿಜಿರಾಮ್ ಜೀ ಯೋಜನೆಯಡಿಯಲ್ಲಿ ಕಾಮಗಾರಿ ವೀಕ್ಷಿಸದೇ ಹಾಗೂ ಸರ್ಕಾರದ ನಿಯಮದಂತೆ ದಿನಗೂಲಿ ಪಾವತಿಸದೇ ತಮ್ಮ ಮನ ಬಂದಂತೆ ಕೂಲಿಕಾರ್ಮಿಕರಿಗೆ ತಲಾ 250 ರೂ ಗಳನ್ನು ಪಾವತಿಸಿ ಕೂಲಿಕಾರ್ಮಿಕರಿಗೆ ಅನ್ಯಾಯ ವೆಸಗುತ್ತಿರುವ ತಾಂತ್ರಿಕ ಅಭಿಯಂತರ ಹಾಗೂ ಪಿಡಿಓ ಅವರನ್ನು ಅಮಾನತ್ತು ಮಾಡಿ ಕೂಲಿಕಾರ್ಮಿಕರಿಗೆ ನ್ಯಾಯ ಒದಗಿಸಿಕೊಡಬೇಕು ಎಂದು ಬಿಜನಗೇರಾ ಗ್ರಾಮ ಪಂಚಾಯತಿ ವ್ಯಾಪ್ತಿಯ ಕೂಲಿಕಾರ್ಮಿಕರು ಒತ್ತಾಯಿಸಿದ್ದಾರೆ.

ತಾಲೂಕಿನ ಹೋಬಳಿಯ ಬಿಜನಗೇರಾ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ವಿಜಿರಾಮ್‌ಜಿ ಅಡಿಯಲ್ಲಿ ಪ್ರತಿ ಮಾನವ ದಿನಗಳಿಗೆ ಕನಿಷ್ಠ 380 ರೂ. ಪಾವತಿಸಲೇಬೇಕೆಂಬ ನಿಯಮವಿದೆ.ಬಿಜನಗೇರಾ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಸರಿಸುಮಾರು 400 ಜನ ಕೂಲಿಕಾರ್ಮಿಕರು ಮಾನವ ದಿನಗಳನ್ನು ನಿರ್ವಹಿಸುತ್ತಿದ್ದಾರೆ. ಜಿಲ್ಲೆಯಾದ್ಯಂತ ಮಳೆಯಿಲ್ಲದೇ

ಮೂರನೇಯ ಪುಟಕ್ಕೆ

ಪ್ರತಿ ಯೂನಿಟ್‌ಗೆ 40 ರಿಂದ 50 ಪೈಸೆ ವಿದ್ಯುತ್ ದರ ಹೆಚ್ಚಳಕ್ಕೆ ಮುಂದಾದ ರಾಜ್ಯ ಸರ್ಕಾರ

ಬೆಂಗಳೂರು,ಅ.22- ರಾಜ್ಯದಲ್ಲಿ ಕಳೆದ ಸೆಪ್ಟೆಂಬರ್ ತಿಂಗಳಿನಲ್ಲಿ ಉಂಟಾಗಿದ್ದ ತೀವ್ರ ವಿದ್ಯುತ್ ಬಿಕ್ಕಟ್ಟನ್ನು ನಿಭಾಯಿಸಲು ಉಂಟಾದ ಹೆಚ್ಚುವರಿ ವೆಚ್ಚವನ್ನು ಸರಿದೂಗಿಸಲು, ಅಕ್ಟೋಬರ್ ಮತ್ತು ನವೆಂಬರ್ ಅವಧಿಯಲ್ಲಿ ವಿದ್ಯುತ್ ದರವನ್ನು ಪ್ರತಿ ಯೂನಿಟ್‌ಗೆ 40 ರಿಂದ 50 ಪೈಸೆಯಷ್ಟು ಹೆಚ್ಚಿಸಲು ರಾಜ್ಯ ಸರ್ಕಾರ ಹಾಗೂ ಇಂಧನ ಇಲಾಖೆ ಯೋಜಿಸಿವೆ.

ಮುಂಬರುವ ನವೆಂಬರ್ 1 ರಿಂದಲೇ ನೂತನ ದರ ಪರಿಷ್ಕರಣೆಯಾಗುವ ಸಂಭವವಿದೆ. ಈ ದರ ಏರಿಕೆಯು ಇಂಧನ ಮತ್ತು ವಿದ್ಯುತ್ ಖರೀದಿ ವೆಚ್ಚ ಹೊಂದಾಣಿಕೆ ನಿಯಮಾವಳಿಗಳ ಅಡಿಯಲ್ಲಿ ಬರಲಿದ್ದು, ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗದ ಅಂತಿಮ ಅನುಮೋದನೆಯೊಂದಿಗೆ ಜಾರಿಗೆ ಬರಲಿದೆ. ಉಚಿತ ವಿದ್ಯುತ್ ಒದಗಿಸುವ ಗೃಹ ಜ್ಯೋತಿ ಯೋಜನೆಯ ವ್ಯಾಪ್ತಿಗೆ ಬಾರದ ಗ್ರಾಹಕರು ಮತ್ತು ವಾಣಿಜ್ಯ ಬಳಕೆಯ ಗ್ರಾಹಕರು ಈ ಹೆಚ್ಚುವರಿ ದರವನ್ನು ತಮ ಮಾಸಿಕ ಬಿಲ್‌ನಲ್ಲಿ ಪಾವತಿಸಬೇಕಾಗುತ್ತದೆ.

ಸೆಪ್ಟೆಂಬರ್ ತಿಂಗಳಿನಲ್ಲಿ ನೈಋತ್ಯ ಮುಂಗಾರು ಮಳೆಯ ಅಭಾವ ಮತ್ತು ಒಣ ಹವೆಯ ವಾತಾವರಣದಿಂದಾಗಿ ರಾಜ್ಯದಾದ್ಯಂತ ವಿದ್ಯುತ್‌ಗೆ ಅಭೂತಪೂರ್ವ ಬೇಡಿಕೆ ಸೃಷ್ಟಿಯಾಗಿತ್ತು. ರಾಜ್ಯದ ಇತಿಹಾಸದಲ್ಲೇ ಮೊದಲ ಬಾರಿಗೆ ವಿದ್ಯುತ್ ಬೇಡಿಕೆಯು ಬರೋಬ್ಬರಿ 20,000 ಮೆಗಾವ್ಯಾಟ್ ದಾಟಿ ಹೊಸ ದಾಖಲೆ ಬರೆದಿದೆ.

ಪವನ ವಿದ್ಯುತ್ ಉತ್ಪಾದನೆ ಕುಸಿತ:

ರಾಜ್ಯದಲ್ಲಿ ಜಲ, ಉಷ್ಣ, ಸೌರ ಮತ್ತು ಪವನ ಶಕ್ತಿಯ ಮೂಲಗಳಿಂದ ಒಟ್ಟು 22,000 ಮೆಗಾವ್ಯಾಟ್‌ವರೆಗೆ ಬೇಡಿಕೆ ಪೂರೈಸುವ ಸಾಮರ್ಥ್ಯವಿದ್ದರೂ, ಗಾಳಿಯ ವೇಗ ಕಡಿಮೆಯಾದ ಕಾರಣ ಪವನ ವಿದ್ಯುತ್ ಉತ್ಪಾದನೆ ತೀವ್ರವಾಗಿ ಕುಸಿಯಿತು. ದೈನಂದಿನ 2,500 - 3,000 ಮೆಗಾವ್ಯಾಟ್ ತಲುಪುತ್ತಿದ್ದ ಪವನ ವಿದ್ಯುತ್ ಉತ್ಪಾದನೆ ಕೇವಲ 200 300 ಮೆಗಾವ್ಯಾಟ್‌ಗೆ ಕುಸಿಯಿತು. ರಾತ್ರಿಯ ಸಮಯದಲ್ಲಿ ಸೌರ ವಿದ್ಯುತ್ ಲಭ್ಯವಿಲ್ಲದಿರುವುದರಿಂದ ಮತ್ತು ಪವನ ವಿದ್ಯುತ್ ಉತ್ಪಾದನೆಯೂ ಇಳಿಕೆಯಾದ್ದರಿಂದ ಪವರ್ ಗ್ರಿಡ್ ಮೇಲಿನ ಒತ್ತಡ ತೀವ್ರವಾಗಿ ಹೆಚ್ಚಾಯಿತು.



ದುಬಾರಿ ವಿದ್ಯುತ್ ಖರೀದಿ :

ರಾಜ್ಯದಲ್ಲಿದ್ದ ತುರ್ತು ಪರಿಸ್ಥಿತಿಯನ್ನು ನಿಭಾಯಿಸಲು ಮತ್ತು ಪದೇ ಪದೇ ಉಂಟಾಗುತ್ತಿದ್ದ ವಿದ್ಯುತ್ ಕಡಿತವನ್ನು ತಡೆಯಲು ಸರ್ಕಾರವು ಮುಕ್ತ ಮಾರುಕಟ್ಟೆಯಿಂದ ಹೆಚ್ಚಿನ ದರ ನೀಡಿ ವಿದ್ಯುತ್ ಖರೀದಿಸಬೇಕಾಯಿತು. ಸಾಮಾನ್ಯವಾಗಿ ನಾವು ಪ್ರತಿ ಯೂನಿಟ್‌ಗೆ ಸುಮಾರು 6 ರಂತೆ ವಿದ್ಯುತ್ ಖರೀದಿಸುತ್ತೇವೆ. ಮಾರುಕಟ್ಟೆಯಲ್ಲಿ ಗರಿಷ್ಠ ಎಂದರೆ 7 ರಿಂದ 8 ಇರುತ್ತದೆ. ಆದರೆ ಸೆಪ್ಟೆಂಬರ್‌ನಲ್ಲಿ ದಕ್ಷಿಣ ಭಾರತದ ಇತರ ರಾಜ್ಯಗಳಲ್ಲೂ ತೀವ್ರ ವಿದ್ಯುತ್ ಅಭಾವವಿದ್ದ ಕಾರಣ ತೀವ್ರ ಪೈಪೋಟಿ ಏರ್ಪಟ್ಟಿತ್ತು. ಕೆಲವು ರಾಜ್ಯಗಳು ಹಗಲಿನ ವೇಳೆಯಲ್ಲೇ ಪ್ರತಿ ಯೂನಿಟ್‌ಗೆ 25 ರಿಂದ 30 ಪಾವತಿಸಿ ವಿದ್ಯುತ್ ಖರೀದಿಸಿದವು ಎಂದು ಇಂಧನ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಗ್ರಾಹಕರಿಗೆ ವಿದ್ಯುತ್ ವಿವೇಕಯುತ ಬಳಕೆ ಸಲಹೆ :

ರಾತ್ರಿ ವೇಳೆಯ ಗ್ರಿಡ್ ಒತ್ತಡವನ್ನು ಕಡಿಮೆ ಮಾಡಲು ಮತ್ತು ವಿದ್ಯುತ್ ಬಳಕೆಯನ್ನು ನಿಯಂತ್ರಿಸಲು ಬೆಸ್ಕಾಂ ಸೇರಿದಂತೆ ವಿವಿಧ ಎಸ್ಕಾಂಗಳು ಗ್ರಾಹಕರಲ್ಲಿ ಜಾಗೃತಿ ಮೂಡಿಸಲು ನಿರ್ಧರಿಸಿವೆ.

ಹಗಲಿನ ಬಳಕೆ ಹೆಚ್ಚಿಸಿ :

ವಾಷಿಂಗ್ ಮೆಷಿನ್‌ಗಳು, ಹೈ-ಹಾರ್ಸ್‌ಪವರ್ ವಾಟರ್ ಪಂಪ್‌ಗಳು ಸೇರಿದಂತೆ ಹೆಚ್ಚು ವಿದ್ಯುತ್ ಎಳೆಯುವ ಉಪಕರಣಗಳನ್ನು ಸೌರಶಕ್ತಿ ಲಭ್ಯವಿರುವ ಹಗಲಿನ ವೇಳೆಯಲ್ಲೇ ಬಳಸಿ ಎಂದು ಅಧಿಕಾರಿಗಳು ಸಾರ್ವಜನಿಕರಿಗೆ ಮನವಿ ಮಾಡಿದ್ದಾರೆ.

ವಾಣಿಜ್ಯ ಸಂಸ್ಥೆಗಳ ಸವಾಲು :

ವಾಣಿಜ್ಯ ಸಂಸ್ಥೆಗಳ ಕಾರ್ಯಾಚರಣೆ ನಿಯಂತ್ರಿಸಲು ಸಾಧ್ಯವಿಲ್ಲದಿದ್ದರೂ, ಗೃಹ ಬಳಕೆಯ ಗ್ರಾಹಕರು ಸ್ವಯಂಪ್ರೇರಿತವಾಗಿ ರಾತ್ರಿ ವೇಳೆಯ ಬಳಕೆಯನ್ನು ಯೋಜಿಸಿದರೆ ಜಾಲದ ಮೇಲಿನ ಒತ್ತಡ ಕಡಿಮೆಯಾಗಲಿದೆ.ಕರ್ನಾಟಕವು ಈಗಾಗಲೇ 3 ವರ್ಷಗಳ ಅವಧಿಯ ದರ ನಿಗದಿ ವ್ಯವಸ್ಥೆಯನ್ನು ಅಳವಡಿಸಿಕೊಂಡಿದ್ದು, 2025ರ ದರ ಪರಿಷ್ಕರಣೆಯು 2028ರವರೆಗೆ ಜಾರಿಯಲ್ಲಿರುತ್ತದೆ. ಆದಾಗ್ಯೂ, ಸೆಪ್ಟೆಂಬರ್‌ನಲ್ಲಾದ ಅಸಾಧಾರಣ ವೆಚ್ಚವನ್ನು ಭರಿಸಲು ಅಡಿಯಲ್ಲಿ ಈ ತಾತ್ಕಾಲಿಕ ಅಲ್ಪಾವಧಿ ಹೆಚ್ಚಳವನ್ನು ಕೈಗೊಳ್ಳಲಾಗುತ್ತಿದ್ದು, ಇದು ಮುಂಬರುವ ತಿಂಗಳಿಗೆ ಮಾತ್ರ ಅನ್ವಯಿಸಲಿದೆ ಎಂದು ಇಂಧನ ಇಲಾಖೆಯ ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ.

ಈಶಾನ್ಯ ಕ್ಷೇತ್ರದ ಶಿಕ್ಷಕರ ಚುನಾವಣೆ: ಕಾಂಗ್ರೆಸ್ ಅಭ್ಯರ್ಥಿ ಗೆಲುವು ನಿಶ್ಚಿತ

ರಾಯಚೂರು, ಅ.22-ಈಶಾನ್ಯ ಕ್ಷೇತ್ರದ ಶಿಕ್ಷಕರ ಚುನಾವಣೆಯಲ್ಲಿ ಬಿಜೆಪಿಗೆ ಸೋಲು ಖಚಿತ,ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಶರಣಪ್ಪ ಮಟ್ಟೂರಿಗೆ ಗೆಲುವು ನಿಶ್ಚಿತ ಎಂದು ವಿಧಾನ ಪರಿಷತ್ ಸದಸ್ಯ ಎ.ವಸಂತ ಕುಮಾರ ಅವರು ಹೇಳಿದರು.

ಅವರಿಂದು ಕಾಂಗ್ರೆಸ್ ಜಿಲ್ಲಾ ಕಚೇರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ,ಈಶಾನ್ಯ ಕ್ಷೇತ್ರದ ಚುನಾವಣೆಯಲ್ಲಿ ಹಿನ್ನಲೆಯಲ್ಲಿ ಜಿಲ್ಲೆಯ ಎಲ್ಲಾ ಶಾಲಾ ಕಾಲೇಜುಗಳಿಗೆ ಭೇಟಿ ನೀಡಿ ಶಿಕ್ಷಕರ ಸಮಸ್ಯೆಗಳನ್ನು ಅಲಿಸಲಾಗಿದೆ. ಚುನಾವಣೆ ಪ್ರಚಾರದಲ್ಲಿ ಉತ್ತಮ ಪ್ರತಿಕ್ರಿಯೆ ದೊರೆತಿದ್ದು, ಕಾಂಗ್ರೆಸ್ ಅಭ್ಯರ್ಥಿಗೆ ಗೆಲುವು ನಿಶ್ಚಿತ ಎಂದು ವಿಶ್ವಾಸ ವ್ಯಕ್ತಪಡಿಸಿದರು.ಚುನಾವಣಾ ಪ್ರಚಾರ ಇಂದು ಅಂತ್ಯಗೊಂಡಿದ್ದು, ಎಲ್ಲರೂ ಒಗ್ಗಟ್ಟುನಿಂದ ಪ್ರಚಾರ ಕೈಗೊಳ್ಳಲಾಗಿತ್ತು.ಕಳೆದ 40 ವರ್ಷಗಳಿಂದ ಪದವೀಧರ ಹಾಗೂ ಈಶಾನ ಕ್ಷೇತ್ರದ ಚುನಾವಣೆಗಳಲ್ಲಿ ಕಾಂಗ್ರೆಸ್ ಪಕ್ಷ ಗೆಲುವು ಸಾಧಿಸಿಲ್ಲ. ಶರಣಪ್ಪ ಮಟ್ಟೂರು ಅವರು ಕಳೆದಚುನಾವಣೆಯಲ್ಲಿ ಸೋಲು ಕಂಡರೂ



ನಿರಂತರ ಕಳೆದ ವರ್ಷಗಳಿಂದ ನಾಲ್ಕು ಶಿಕ್ಷಕರನ್ನು ಭೇಟಿಯಾಗಿ ಅವರ ಕುಂದು ಕೊರತೆಗಳು ಹಾಗೂ ಸಮಸ್ಯೆಗಳನ್ನು ಅಲಿಸಲಾಗಿದೆ.

ಶಿಕ್ಷಕರ ನೇಮಕಾತಿ, ವರ್ಗಾವಣೆ ಹಾಗೂ ಇಂಕ್ರಿಮಿಂಟ್ ಹೆಚ್ಚಳ ಮಾಡುವುದು ಶಿಕ್ಷಕರ ಪ್ರಮುಖ ಬೇಡಿಕೆಯಾಗಿದೆ. ಈ ಬಾರಿ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗೆ ಗೆಲುವು ನಿಶ್ಚಿತ ಎಂದರು. ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಎನ್‌ಪಿಸಿ ಕಾಯ್ದೆಯನ್ನು ರಾಜ್ಯದಲ್ಲಿ ತಡೆಹಿಡಿಯಲಾಗಿದೆ. ಶಿಕ್ಷಣ ತಜ್ಞರು ಹಾಗೂ ಪ್ರಜ್ಞಾವಂತ ನಾಯಕರೊಂದಿಗೆ ಸಮಾಲೋಚನೆ ನಡೆಸಿ ಎನ್ ಪಿ ಎಸ್ ಜಾರಿಗೆ ಕುರಿತು ನಿರ್ಣಯ ತೆಗೆದುಕೊಳ್ಳಲಾಗುವುದು ಎಂದರು. ಬಿಜೆಪಿ ಧರ್ಮ, ಜಾತಿ ಹೆಸರಲ್ಲಿ ರಾಜಕೀಯ ಮಾಡುತ್ತಿದ್ದಾರೆ. ಆರ್ ಎಸ್ ಎಸ್ ಮತ್ತು ಮೋದಿ ನೇತೃತ್ವದ ಬಿಜೆಪಿ ಸರಕಾರ ಕಳೆದ 13 ವರ್ಷಗಳಿಂದ ದೇಶದ ಜನರಿಗೆ ಸುಳ್ಳು ಹೇಳಿ ಮೋಸ ಮಾಡಲಾಗುತ್ತಿದೆ. ಆರ್ ಎಸ್

ಮೂರನೇಯ ಪುಟಕ್ಕೆ

ಸಮಾಜದ ಶಾಂತಿಗೆ ಪೊಲೀಸರ ಕಾರ್ಯ ಶ್ಲಾಘನೀಯ

ರಾಯಚೂರು,ಅ.22

ಪೊಲೀಸರು ಕೇವಲ ಕಾನೂನು ಜಾರಿಗೊಳಿಸುವ ಸಿಬ್ಬಂದಿಯಲ್ಲ, ಸಂಕಷ್ಟದ ಸಂದರ್ಭಗಳಲ್ಲಿ ಸಾರ್ವ ಜನಿಕರ ನೆರವಿಗೆ ಧಾವಿಸುವ ರಕ್ಷಕ ರು. ಅಪರಾಧ ತಡೆಗಟ್ಟಿ ಸಮಾಜ ದಲ್ಲಿ ಶಾಂತಿ ಸುವ್ಯವಸ್ಥೆ ಕಾಪಾಡಲು ಅವರ ಪರಿಶ್ರಮ ಅನನ್ಯವಾಗಿದೆ ಎಂದು ಜಿಲ್ಲಾಧಿಕಾರಿ ಪೂವಿತಾ ಎಸ್ ತಿಳಿಸಿದರು.



ನಗರದ ಜಿಲ್ಲಾ ಪೊಲೀಸ್ ಕವಾಯತು ಮೈದಾನದ ಬಳಿಯ ಹುತಾತ್ಮರ ಸ್ಮಾರಕದಲ್ಲಿ ಬುಧವಾರ ಪೊಲೀಸ್ ಹುತಾತ್ಮರ ದಿನಾಚರಣೆ ಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಸಾರ್ವಜನಿಕ ಆಸ್ತಿಪಾಸ್ತಿ ರಕ್ಷಣೆ ಮಾಡುವ ಪೊಲೀಸರು ದೇಶದ ಭದ್ರತೆ ಕಾಪಾಡುತ್ತಿದ್ದಾರೆ.

1959ರಲ್ಲಿ ಚೀನಾ ಸೈನಿಕರ ವಿರುದ್ಧ ಹೋರಾಡಿ ಹುತಾತ್ಮರಾದ ಸಿಆರ್‌ಪಿಎಫ್ ಸಿಬ್ಬಂದಿಯ ಶೌರ್ಯ ಮತ್ತು ದೇಶಪ್ರೇಮ ಇಂದಿನ ಪೊಲೀಸ್ ಸಿಬ್ಬಂದಿಗೆ ಮಾದರಿಯಾಗಿದೆ. ದೇಶದ ಗಡಿರಕ್ಷಣೆಯಿಂದ ಹಿಡಿದು ಆಂತರಿಕ ಭದ್ರತೆಯವರೆಗೆ ಪೊಲೀಸ್ ಪಡೆಗಳು ನೀಡಿರುವ ಕೊಡುಗೆ ಅಪಾರವಾಗಿದೆ ಎಂದು ಸ್ಮರಿಸಿದರು.

ರಾಯಚೂರು ಜಿಲ್ಲೆಯಲ್ಲಿ ಕರ್ತವ್ಯದ ವೇಳೆ ಪ್ರಾಣತ್ಯಾಗ ಮಾಡಿದ ಪೊಲೀಸ್ ಸಿಬ್ಬಂದಿ ಇಸ್ಮಾಯಿಲ್ ಹಾಗೂ ರೇಣುಕಾ ಅವರ ಸೇವೆ ಮತ್ತು ಬಲಿದಾನವನ್ನೂ ಜಿಲ್ಲಾಧಿಕಾರಿ ಸ್ಮರಿಸಿದರು. ಸಾರ್ವಜನಿಕರ ರಕ್ಷಣೆಗಾಗಿ ತಮ್ಮ ಪ್ರಾಣವನ್ನೇ ಅರ್ಪಿಸಿದ ಇಂತಹ ಸಿಬ್ಬಂದಿಯ ತ್ಯಾಗವು ಪೊಲೀಸ್ ಇಲಾಖೆಯ ಕರ್ತವ್ಯನಿಷ್ಠೆಗೆ ಸಾಕ್ಷಿಯಾಗಿದೆ ಎಂದು ಹೇಳಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅರುಣಾಂಗ್ಶು ಗಿರಿ ಅವರು ಹುತಾತ್ಮರ ಸ್ಮಾರಕಕ್ಕೆ ಪುಷ್ಪಗುಚ್ಛವಿರಿಸಿ ಗೌರವ ನಮನ ಸಲ್ಲಿಸಿ ಮಾತನಾಡಿ, ಪೊಲೀಸ್ ಹುತಾತ್ಮರ ದಿನಾಚರಣೆಯ ಐತಿಹಾಸಿಕ ಹಿನ್ನೆಲೆ ಹಾಗೂ ಅದರ ಮಹತ್ವವನ್ನು ವಿವರಿಸಿದರು.

ಹೊನ್ನಹಳ್ಳಿ ಬಳಿ ಭೀಕರ ಅಪಘಾತ: ಶಾಸಕ ಮಾನಪ್ಪ ವಜ್ಜಲ್ ಸಹೋದರನ ಪುತ್ರನಿಗೆ ಗಂಭೀರ ಗಾಯ

ಲಿಂಗಸುಗೂರು: ತಾಲೂಕಿನ ಹೊನ್ನಹಳ್ಳಿ ಗ್ರಾಮದ ಸಮೀಪ ಬುಧವಾರ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ಶಾಸಕ ಮಾನಪ್ಪ ವಜ್ಜಲ್ ಅವರ ಸಹೋದರ ನಾಗಪ್ಪ ವಜ್ಜಲ್ ಅವರ ಪುತ್ರ ಮಲ್ಲು ವಜ್ಜಲ್ ಗಂಭೀರವಾಗಿ ಗಾಯಗೊಂಡಿದ್ದಾರೆ ಎಂದು ತಿಳಿದುಬಂದಿದೆ.

ಅಪಘಾತದ ರಭಸಕ್ಕೆ ವಾಹನ ಸಂಪೂರ್ಣ ಜಖಂಗೊಂಡಿದ್ದು, ಸ್ಥಳೀಯರು ಗಾಯಾಳುವನ್ನು ಕೂಡಲೇ ರಕ್ಷಿಸಿ ಆಸ್ಪತ್ರೆಗೆ ದಾಖಲಿಸಿದ್ದಾರೆ.

ಮಲ್ಲು ವಜ್ಜಲ್ ಅವರ ಸ್ಥಿತಿ ಗಂಭೀರವಾಗಿದೆ ಎನ್ನಲಾಗಿದ್ದು, ಹೆಚ್ಚಿನ ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಲಾಗಿದೆ.



ಹೆಚ್ ಡಿಕೆ ವಿರುದ್ಧ ಪ್ರಿಯಾಂಕ ಖರ್ಗೆ ಟೀಕೆ ನಿಲ್ಲಿಸದಿದ್ದರೆ ಹೋರಾಟ

ರಾಯಚೂರು, ಅ.22-

ಕೇಂದ್ರ ಸಚಿವರು ಹೆಚ್ ಡಿ ಕುಮಾರಸ್ವಾಮಿ ಅವರ ಬಗ್ಗೆ ಗೃಹ ಸಚಿವ ಪ್ರಿಯಾಂಕ ಖರ್ಗೆ ಅವರ ಇಲ್ಲ ಸಲ್ಲದ ಟೀಕೆ ಮಾಡುವುದನ್ನು ನಿಲ್ಲಿಸಿ, ತಮಗೆ ನೀಡಿರುವ ಜವಾಬ್ದಾರಿಯುತ ಸ್ಥಾನವನ್ನು ಸರಿಯಾಗಿ ನಿಭಾಯಿಸಬೇಕು ಎಂದು ಜೆಡಿಎಸ್ ಪರಿಶಿಷ್ಟ ಜಾತಿ ವಿಭಾಗದ ಘಟಕದ ಮುಖಂಡರು ನರಸಪ್ಪ ಅವರು ಹೇಳಿದರು.



ಅವರಿಂದು ನಗರದ ಸುದ್ದಿಗಾರರೊಂದಿಗೆ ಮಾತನಾಡಿ,ಕುಮಾರಸ್ವಾಮಿ ಅವರು ದಲಿತ ಬಲಿತ ಎಂಬ ಹೇಳಿಕೆ ನೀಡಿದ್ದಾರೆ ಎಂದು ಪ್ರಿಯಾಂಕ ಖರ್ಗೆ ಅವರ ವಿರುದ್ಧ ಆರೋಪ ಮಾಡುತ್ತಿರುವುದು ಸರಿಯಲ್ಲ. ಹೆಚ್ ಡಿಕೆ ಅವರು ರಾಜ್ಯದ ಎರಡು ಭಾರಿ ಮುಖ್ಯಮಂತ್ರಿಗಳು ಆಗಿದ್ದಾರೆ.ಪ್ರಿಯಾಂಕ ಖರ್ಗೆ ಅವರಿಗೆ ಗೃಹ ಖಾತೆ ಬಹುದೊಡ್ಡ ಜವಾಬ್ದಾರಿ ನೀಡಿದ್ದು, ಖಾತೆಯನ್ನು ಸರಿಯಾಗಿ ನಿಭಾಯಿಸಲು ಸಾಧ್ಯವಾಗದಿದ್ದರೆ ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಿದರರು. ಜಿಲ್ಲೆಯಲ್ಲಿ ಮೂರು ಜನರ ದಲಿತರ ಸಾಮೂಹಿಕ ಅತ್ಯಾಚಾರ ಮತ್ತು ಭೀಕರ ಕೊಲೆ ನಡೆದರು ಸೌಜನಕ್ಕಾದರೂ ಜಿಲ್ಲೆಗೆ ಭೇಟಿ ನೀಡಿ

ಮೃತರ ಕುಟುಂಬಸ್ಥರಿಗೆ ಸ್ವಾಂತನ ಹೇಳಬೇಕಿತ್ತು. ದಲಿತರ ಬಗ್ಗೆ ನಿಜವಾಗಲೂ ಕಾಳಜಿ ಇದ್ದಾರೆ ಭೇಟಿ ನೀಡುತ್ತಿದ್ದರು. ಕೆಪಿಸಿಸಿ ಹಗರಣದ ದ್ವನಿ ಎತ್ತದ ಖರ್ಗೆ ಅವರು ಕುಮಾರಸ್ವಾಮಿ ಬಗ್ಗೆ ಇಲ್ಲ ಸಲ್ಲದ ಆರೋಪ ಸರಿಯಲ್ಲ. ಕೆಪಿಸಿಸಿ ಯಲ್ಲಿ ನಡೆದ ಹಗರಣದ ದಾಖಲೆ ಸಮೇತ ಮುಂದಿನ ದಿನದಲ್ಲಿ ಬಹಿರಂಗ ಪಡಿಸಲಾಗುವುದೆಂದು ಕುಮಾರಸ್ವಾಮಿ ಅವರು ಹೇಳಿದ್ದಾರೆ ಎಂದರು. ಕುಮಾರಸ್ವಾಮಿ ಅವರ ವಿರುದ್ಧ ಟೀಕೆ ಮಾಡುವುದನ್ನು ಮುಂದುವರೆಸಿದರೆ ರಾಜ್ಯದ ಮುಖಂಡರಿಂದ ಅನುಮತಿ ಬಂದ ನಂತರ ಜಿಲ್ಲಾ ಮಟ್ಟದಲ್ಲಿ ಹೋರಾಟ ನಡೆಸಲಾಗುವುದು ಎಚ್ಚರಿಸಿದರೂ.

ಈ ಸಂದರ್ಭದಲ್ಲಿ ನರಸಿಂಹಲು ಕಟ್ಟಿಮನಿ, ಪ್ರಕಾಶನರಸಪ್ಪ, ಎ.ರಾಮು ರವಿಕುಮಾರ, ರಾಜು ಸೇರಿದಂತೆ ಉಪಸ್ಥಿತರಿದ್ದರು.



ಎಐಎಂಐಎಂ ಪಕ್ಷದ ಸಭೆ

ಮುದಗಲ್

ಇಂದು ಎಐಎಂಐಎಂ ಕರ್ನಾಟಕ ಉಸ್ತುವಾರಿ ಹಾಗೂ ಹೈದರಾಬಾದ್ ಕಾರ್ಪೊರೇಟರ್ ಜನಾಬ್ ಸಲೀಂ ಸಾಬ್ ಅವರು ರಾಯಚೂರು ಪ್ರವಾಸದಲ್ಲಿದ್ದ ಸಂದರ್ಭದಲ್ಲಿ, ಅವರನ್ನು ಭೇಟಿ ಮಾಡಿ ಪಕ್ಷದ ಸಂಘಟನೆ ಕುರಿತು ಮಹತ್ವದ ಚರ್ಚೆ ನಡೆಸಲಾಯಿತು.

ಈ ಸಂದರ್ಭದಲ್ಲಿ ಮುಂಬರುವ ದಿನಗಳಲ್ಲಿ ಪಕ್ಷವನ್ನು ಮತ್ತಷ್ಟು ಬಲಿಷ್ಠಗೊಳಿಸುವುದು, ಪಕ್ಷದ ಸಂಘಟನೆಯನ್ನು ತಳಮಟ್ಟದಿಂದ ಬಲಪಡಿಸುವುದು ಹಾಗೂ ಮುಂಬರುವ ಚುನಾವಣೆಗಳ ಕುರಿತು ಚರ್ಚಿಸಲಾಯಿತು.

ಪಕ್ಷದ ಬೆಳವಣಿಗೆಗಾಗಿ ಎಲ್ಲರೂ ಒಗ್ಗಟ್ಟಿನಿಂದ ಶ್ರಮಿಸಿ, ಜನರ ಸಮಸ್ಯೆಗಳಿಗೆ ಸ್ಪಂದಿಸುವ ಮೂಲಕ ಪಕ್ಷವನ್ನು ಇನ್ನಷ್ಟು ಬಲಿಷ್ಠಗೊಳಿಸುವ ಸಂಕಲ್ಪ ಮಾಡಲಾಯಿತು.

ಕಾನೂನು ಸುವ್ಯವಸ್ಥೆ ಕಾಪಾಡುವಲ್ಲಿ ಪೊಲೀಸ್ ಇಲಾಖೆಯ ಪಾತ್ರ ಅನನ್ಯ: ದುಡಾ ಆಯುಕ್ತೆ ರೇಣುಕಾ

ದಾವಣಗೆರೆ

ರಾಜ್ಯ ಮತ್ತು ದೇಶದ ಆಂತರಿಕ ಭದ್ರತೆ, ಕಾನೂನು ಹಾಗೂ ಸುವ್ಯವಸ್ಥೆಯನ್ನು ಕಾಪಾಡುವಲ್ಲಿ ಪೊಲೀಸ್ ಇಲಾಖೆಯ ಪಾತ್ರ ಹಿರಿದಾದದ್ದು. ಹಗಲಿರಳು, ಚಳಿ-ಮಳೆ ಎನ್ನದೆ, ಹಗಲು-ರಾತ್ರಿ ಕರ್ತವ್ಯ ನಿರ್ವಹಿಸುವ ಪೊಲೀಸ್ ಸಿಬ್ಬಂದಿ ತಮ್ಮ ಕುಟುಂಬದ ಜೊತೆ ಸಮಯ ಕಳೆಯಲು ಸಾಧ್ಯವಾಗದಿದ್ದರೂ ಅತ್ಯಂತ ಸಮರ್ಪಣಾ ಭಾವ ದಿಂದ ಸೇವೆ ಸಲ್ಲಿಸುತ್ತಿದ್ದಾರೆ ಎಂದು ದಾವಣಗೆರೆ ಹರಿಹರ ಅಭಿವೃದ್ಧಿ ಪ್ರಾಧಿಕಾರದ ಆಯುಕ್ತೆ ರೇಣುಕಾ ಅವರು ತಿಳಿಸಿದರು.

ಅವರು ಬುಧವಾರ ಜಿಲ್ಲಾ ಪೊಲೀಸ್ ಕವಾಯತು ಮೈದಾನದಲ್ಲಿ ನಡೆದ ಪೊಲೀಸ್ ಹುತಾತ್ಮರ ದಿನಾಚರಣೆಯಲ್ಲಿ ಪೊಲೀಸ್ ಹುತಾತ್ಮರ ಸ್ಮಾರಕಕ್ಕೆ ಪುಷ್ಪ ಗುಚ್ಛ ಸಲ್ಲಿಸಿ ಮಾತನಾಡಿದರು.

ದಾವಣಗೆರೆ ಜಿಲ್ಲೆಯ ಪೊಲೀಸ್ ಇಲಾಖೆಯು ಜಿಲ್ಲೆಯ ಜನತೆ ಹಾಗೂ ಸಾರ್ವಜನಿಕರೊಂದಿಗೆ ಅತ್ಯುತ್ತಮ ಒಡನಾಟವನ್ನು ಹೊಂದಿದ್ದು, ಎಲ್ಲಾ ಹಂತದ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಅತ್ಯಂತ ಜವಾಬ್ದಾರಿಯಿಂದ ಕಾರ್ಯನಿರ್ವಹಿಸುತ್ತಿದ್ದಾರೆ ರಿಂಗ್ ರೋಡ್ ಸೇರಿದಂತೆ ನಗರದ ಸಂಚಾರ ನಿರ್ವಹಣೆಯನ್ನು ಅಚ್ಚುಕಟ್ಟಾಗಿ ನಿರ್ವಹಿಸಲು ಜಿಲ್ಲಾ ಆಡಳಿತ ಹಾಗೂ ಪೊಲೀಸ್ ಇಲಾಖೆ ಕೈಜೋಡಿಸಿ ಶ್ರಮಿಸುತ್ತಿದೆ ಎಂದು ತಿಳಿಸಿದರು.

ದೇಶದ ರಕ್ಷಣೆಗಾಗಿ ಪ್ರಾಣತೆತ್ತ ವೀರ ಯೋಧರನ್ನು ಸ್ಮರಿಸುವ ದಿನ ಇದಾಗಿದ್ದು, ದೇಶದಲ್ಲಿ 154 ಹಾಗೂ ಕರ್ನಾಟಕದಲ್ಲಿ 5 ವೀರ ಯೋಧರು ಮರಣ ಹೊಂದಿದ್ದಾರೆ ಎಂದರು.

ದುರ್ಗಮ್ಮ ಜಾತ್ರೆ, ಗಣೇಶ ಮೂರ್ತಿ ವಿಸರ್ಜನೆ, ಈದ್ ಮಿಲಾದ್ ಹಾಗೂ ಇತರ ಪ್ರಮುಖ ಹಬ್ಬಗಳು ಮತ್ತು ಸಾರ್ವಜನಿಕ ಸಭೆ-ಸಮಾರಂಭಗಳನ್ನು ಯಾವುದೇ ಅಡಚಣೆಯಿಲ್ಲದೆ, ಶಾಂತಿಯುತವಾಗಿ ಹಾಗೂ ಸುವ್ಯವಸ್ಥಿತವಾಗಿ ನಡೆಸಿಕೊಂಡು ಬರುವಲ್ಲಿ ಪೊಲೀಸರ ಪಾತ್ರ ಹಿರಿಯದು.



ಬೀದಿಬದಿ ವ್ಯಾಪಾರಿಗಳ ಸಂಘ, ಆಟೋ ಚಾಲಕರ ಸಂಘ ಹಾಗೂ ಕಾಲೋನಿಗಳಲ್ಲಿ ಕಾನೂನು-ಸುವ್ಯವಸ್ಥೆಯ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ನಿರಂತರವಾಗಿ ಹಮ್ಮಿಕೊಳ್ಳಲಾಗುತ್ತಿದೆ ಎಂದು ತಿಳಿಸಿದರು.

ಪೊಲೀಸ್ ಇಲಾಖೆಯು ಕೇವಲ ಕಾನೂನು ರಕ್ಷಣೆ ಮಾತ್ರವಲ್ಲದೆ, ಜನಸ್ನೇಹಿ ಆಡಳಿತಕ್ಕೆ ಮುನ್ನುಡಿ ಬರೆದಿದೆ. ಪೊಲೀಸ್ ಇಲಾಖೆಯು 24 ಗಂಟೆಯೂ ಸಾರ್ವಜನಿಕರ ರಕ್ಷಣೆಗೆ ಸದಾ ಸಿದ್ಧವಿದ್ದು, ಸಾರ್ವಜನಿಕರು ಸಹ ಇಲಾಖೆಯೊಂದಿಗೆ ಸಹಕರಿಸಿ ಕಾನೂನು ಸುವ್ಯವಸ್ಥೆಯನ್ನು ಕಾಪಾಡಲು ಕೈಜೋಡಿಸಬೇಕೆಂದು ಮನವಿ ಮಾಡಿದರು.

ಪೂರ್ವ ವಲಯದ ಪೊಲೀಸ್ ಮಹಾ ನಿರೀಕ್ಷಕರಾದ ಎನ್ ಸತೀಶ್ ಕುಮಾರ್ ಅವರು ಮಾತನಾಡಿ ಸುರಕ್ಷಿತ ಸಮಾಜದ ನಿರ್ಮಾಣಕ್ಕಾಗಿ ಪೊಲೀಸರ ಪಾತ್ರ ಹಿರಿದಾಗಿದ್ದು, ಕರ್ತವ್ಯದ ವೇಳೆ ಜೀವತ್ಯಾಗ ಮಾಡಿದ ಹಾಗೂ ಸೇವೆ ಸಲ್ಲಿಸುತ್ತಿರುವ ಪೊಲೀಸ್ ಸಿಬ್ಬಂದಿಯ ತ್ಯಾಗ-ಬಲಿದಾನಗಳು ಸ್ಮರಣೀಯ ಎಂದು ಅಭಿಪ್ರಾಯಪಟ್ಟರು.

ಪೊಲೀಸರು ತಮ್ಮ ಜೀವವನ್ನೇ ತ್ಯಾಗ ಮಾಡುವುದರ ಜೊತೆಗೆ, ಬದುಕಿರುವಾಗಲೂ ಸಮಾಜಕ್ಕಾಗಿ ಅಪಾರ ತ್ಯಾಗಗಳನ್ನು ಮಾಡುತ್ತಾ ಬಂದಿದ್ದಾರೆ. ಸರ್ವಿಸ್ ಬಿಫೋರ್ ಸೆಲ್ಫ್ (ಸ್ವಾರ್ಥಕ್ಕೂ ಮುನ್ನ ಸೇವೆ) ಎನ್ನುವ ತತ್ವವೇ ಪೊಲೀಸ್ ಪಡೆಯ ಮೂಲ ಮಂತ್ರವಾಗಿದೆ. ಹಿಂದಿನ ದಶಕಗಳಲ್ಲಿ ಇದ್ದಂತಹ ಆಂತರಿಕ ಗೊಂದಲಗಳು, ನಕ್ಸಲಿಸಂ, ಭಯೋತ್ಪಾದನೆ ಹಾಗೂ ಕೋಮುಗಲಭೆಗಳಂತಹ ಸವಾಲುಗಳನ್ನು ಎದುರಿಸಿ ಇಂದು ದೇಶವನ್ನು ಒಂದು ಸುರಕ್ಷಿತ ಮತ್ತು ಅಭಿವೃದ್ಧಿ ಹೊಂದಿದ ಸ್ಥಿತಿಗೆ ತರಲು ಪೊಲೀಸ್ ಸಿಬ್ಬಂದಿಯ ತ್ಯಾಗ ಕಾರಣವಾಗಿದೆ ಎಂದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಶೇಖರ್ ಹೆಚ್. ಟಿ ಅವರು ಮಾತನಾಡಿ 1953 ಅಕ್ಟೋಬರ್ 21 ರಂದು ಸಿ.ಆರ್.ಪಿ.ಎಫ್ ಡಿ.ಎಸ್.ಪಿ ಕರಣ್ ಸಿಂಗ್ ಇವರ ನೇತೃತ್ವದಲ್ಲಿ ಸಿ.ಆರ್.ಪಿ.ಎಫ್. ತುಕುಡಿಯು ಲಡಾಖ್ ಪ್ರದೇಶದಲ್ಲಿರುವ ಹಾಟ್ ಸ್ಪ್ರಿಂಗ್ ಹತ್ತಿರ ಗಸ್ತು ಮಾಡುತ್ತಿರುವಾಗ, ಅವರಿಗಿಂತಲೂ ಹೆಚ್ಚಿನ ಸಂಖ್ಯೆಯಲ್ಲಿರುವ ಚೀನಾ ದೇಶದ ಸೈನಿಕರು ಸದರಿ ಸಿ.ಆರ್.ಪಿ.ಎಫ್.ನ ತುಕುಡಿಯ ಮೇಲೆ ದಾಳಿ ಮಾಡಿರುತ್ತಾರೆ. ತಮ್ಮ ಸಿ.ಆರ್.ಪಿ.ಎಫ್. ಜವಾನರ ಹತ್ತಿರ ಕೇವಲ ಸಾಮಾನ್ಯ ರೀತಿಯ ಬಂದೂಕುಗಳನ್ನು ಹೊಂದಿದ್ದು, ಶತ್ರು ಸೈನಿಕರು ಅವರಿಗಿಂತಲೂ ಸುಸಜ್ಜಿತ ಮದ್ದುಗುಂಡುಗಳು ಮತ್ತು ಆಯುಧಗಳನ್ನು ಹೊಂದಿದ್ದರೂ ಸಹ, ಭಾರತದ ಜವಾನರು ಧೈರ್ಯ ಮತ್ತು ಸಾಹಸದಿಂದ ಚೀನಾ ದೇಶದ ಸೈನಿಕರೊಂದಿಗೆ ವೀರಾವೇಶದಿಂದ ಹೋರಾಡಿರುತ್ತಾರೆ.

ಈ ಹೋರಾಟದಲ್ಲಿ 10 ಸಿ.ಆರ್.ಪಿ.ಎಫ್. ಜವಾನರು ವೀರಮರಣವನ್ನು ಹೊಂದಿದ್ದು, 9 ಜವಾನರನ್ನು ಚೀನಾ ದೇಶದ ಸೈನಿಕರು ದಸ್ತಗಿರಿ ಮಾಡಿರುತ್ತಾರೆ. ನಮ್ಮ ಸಿ.ಆರ್.ಪಿ.ಎಫ್. ಜವಾನರ ಧೈರ್ಯ ಮತ್ತು ಸಾಹಸವನ್ನು ಹಾಗೂ ಆತ್ಮಸಂಪರ್ಪಣೆಯನ್ನು ಭಾರತ ದೇಶದ ಎಲ್ಲಾ ಪ್ರಜೆಗಳು ಸ್ಮರಿಸುತ್ತಾರೆ. ದೇಶಕ್ಕಾಗಿ ಹೋರಾಡುತ್ತಾ ವೀರಸ್ವರ್ಗ ಪಡೆದ ಈ ಶೂರರ ಸ್ಮರಣೆಗಾಗಿ ಸ್ಮಾರಕವನ್ನು ಲಡಾಖ್ನಲ್ಲಿ ಅಬಾಸಿಚಿನ್ ಭಾಗದಲ್ಲಿ ಹದಿನೆಂಟು ಸಾವಿರ ಅಡಿ ಅಡಿ ಎತ್ತರದ ಮೇಲೆ ನಿರ್ಮಿಸಲಾಗಿದೆ ಎಂದರು.

ತಮ್ಮ ಕರ್ತವ್ಯ ಪಾಲನೆಯಲ್ಲಿ ಪ್ರತಿವರ್ಷ ದೇಶದಲ್ಲಿ ಅನೇಕ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿ ತಮ್ಮ ಪ್ರಾಣವನ್ನು ಕಳೆದುಕೊಳ್ಳುತ್ತಿದ್ದಾರೆ. ಅಂತಹವರ ಸ್ಮರಣೆಗಾಗಿ ಪ್ರತಿವರ್ಷ ಅಕ್ಟೋಬರ್ 21 ರಂದು ಪೊಲೀಸ್ ಹುತಾತ್ಮರ ದಿನಾಚರಣೆಯನ್ನಾಗಿ ಆಚರಿಸಲಾಗುತ್ತದೆ.

ಈ ವರ್ಷ ಅಂದರೆ 2025 ಸೆಪ್ಟೆಂಬರ್ 1 ರಿಂದ 2026 ಆಗಸ್ಟ್ 31 ರವರೆಗೆ ಭಾರತ ದೇಶದಲ್ಲಿ ಕರ್ತವ್ಯ ಪಾಲನೆಯಲ್ಲಿ ವೀರಮರಣ ಹೊಂದಿದ ಒಟ್ಟು 154 ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿವರಿದ್ದು, ರಾಜ್ಯದ ಪೊಲೀಸ್ ನಿರೀಕ್ಷಕ ಪಚ್ಚಯ್ಯ ವೀರಯ್ಯ ಸಾಲಿಮಠ ಉಪ ನಿರೀಕ್ಷಕ ಬಸವ ರಾಜ ಎಂ ಎಲ್ ಮುಖ್ಯ ಪೇದೆಗಳಾದ ಬೀರ ಲಿಂಗ, ಎ ಎಂ ಸಾಲಿಮಠ ಹಾಗೂ ಇಸ್ಮಾಯಿಲ್ 5 ಜನ ಹುತಾತ್ಮರಾಗಿರುತ್ತಾರೆ ಎಂದರು.

ಹೆಚ್ಚುವರಿ ಪೊಲೀಸ್ ವರಿಷ್ಠಾ ಧಿಕಾರಿ ಪರಮೇಶ್ವರ ಹೆಗಡೆ ಡಿವೈಎಸ್ಪಿ ತಿಪ್ಪೇ ಸ್ವಾಮಿ, ಬಸವರಾಜ,ಕೃಷ್ಣಮೂರ್ತಿ ಹಾಗೂ ಶರಣ ಬಸವೇಶ್ವರ ಬಿ ಪೊಲೀಸ್ ನಿರೀಕ್ಷಕರು ಸೇರಿದಂತೆ ನಿವೃತ್ತ ಪೊಲೀಸ್ ಅಧಿಕಾರಿಗಳು ಮತ್ತು ಇತರರು ಉಪಸ್ಥಿತರಿದ್ದರು



ಬೀದಿ ವ್ಯಾಪಾರಿಗಳ ಸಂಘದಿಂದ ನವರಾತ್ರಿ ಉತ್ಸವ-ಸಾಧಕರಿಗೆ ಸೇವಾ ರತ್ನ ಪ್ರಶಸ್ತಿ ಪ್ರದಾನ

ಕಲಬುರಗಿ,

ಪ್ರತಿ ವರ್ಷದಂತೆ ಈ ವರ್ಷವೂ ಕೂಡ ನಾಡದೇವಿಯ ಕೃಪೆ ಮತ್ತು ಆಶೀರ್ವಾದಿಂದ ಬೀದಿ ವ್ಯಾಪಾರಿಗಳ ಸಂಘ ವಿವಿಧ ಕ್ಷೇತ್ರಗಳ ಸಾಧಕರನ್ನು ಗುರುತಿಸಿ ಸೇವಾರತ್ನ ಪ್ರಶಸ್ತಿ ನೀಡಿ ಗೌರವಿಸುತ್ತಿದೆ. ನಾಡ ದೇವಿ ಸರ್ವರಿಗೂ ಆರೋಗ್ಯ ಆಯುಷ್ಯ ಮತ್ತು ಸಂಪತನ್ನು ದಯಪಾಲಿಸಲಿ ಎಂದು ಬೀದಿವ್ಯಾಪಾರಿಗಳ ಸಂಘದ ಸಂಸ್ಥಾಪಕ ಅಧ್ಯಕ್ಷ ಜಗನ್ನಾಥ ಎಸ್.ಸೂರ್ಯವಂಶಿ ಅವರು ಶುಭ ಹಾರೈಸಿದರು.

ಅಖಿಲ ಕರ್ನಾಟಕ ರಾಜ್ಯ ಬೀದಿ ವ್ಯಾಪಾರಿಗಳ ಸಂಘದ ಆಶ್ರಯದಲ್ಲಿ ನಗರದ ಜಗತ್ ವೃತ್ತ ಅತ್ತರಕಂಪೌಂಡ್ ಗಾಜೀಪೂರದ ಸೂರ್ಯವಂಶಿ ಅವರ ನಿವಾಸದಲ್ಲಿ ಆಯೋಜಿಸಿದ್ದ ನಾಡ ಹಬ್ಬ ಸದರಾ ನವರಾತ್ರಿ ಉತ್ಸ ವ, ಸೇವಾ ರತ್ನ ಪ್ರಶಸ್ತಿ ಪ್ರದಾನ ಮತ್ತು ಮಹಾಪ್ರಸಾದ ವಿತರಣೆ ಕಾರ್ಯಕ್ರಮದ ನೇತೃತ್ವ ವಹಿಸಿ ಮಾತನಾಡಿದ ಅವರು, ಬೀದಿ ವ್ಯಾಪಾರಿಗಳ ಕಲ್ಯಾಣಕ್ಕಾಗಿ ಹಾಗೂ ಅವರ ಹಕ್ಕುಗಳ ರಕ್ಷಣೆಗಾಗಿ ಸಂಘ ಮುಂಚೂಣಿಯಲ್ಲಿ ನಿಂತು ಹೋರಾಟ ಕೈಗೊಳ್ಳುತ್ತದೆ ಎಂದರು.

ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಶಾಸಕ ಅಲ್ಲಮಪ್ರಭು ಪಾಟೀಲ ಅವರು, ಎಲ್ಲ ಸಮುದಾಯವನ್ನು ವಿಶ್ವಾಶಕ್ಕೆ ತೆಗೆದುಕೊಂಡು ಇಂತಹ ವಿಶೇಷ ಕಾರ್ಯಕ್ರಮವನ್ನು ಆಯೋಸುತ್ತಿರುವ ಸೂರ್ಯವಂಶಿ ಅವರು, ಹಲವಾರು ದಶಕಗಳಿಂದ ಬೀದಿ ವ್ಯಾಪಾರಿಗಳಿಗೆ ನ್ಯಾಯಕಲ್ಪಿಸಲು ಶ್ರಮಿಸುತ್ತಿದ್ದಾರೆ ಅವರ ಈ ಜನಪರ ಕಾಳಜಿ ಮತ್ತು ಸೇವೆಗೆ ತಾಯಿ ಜಗದಂಭದೇವಿ ಅನುಗ್ರಹ ನೀಡಲಿ ಎಂದು ಶುಭ ಹಾರೈಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಹಿರಿಯ ಪತ್ರಕರ್ತರು ಮತ್ತು ಸಂಘದ ರಾಜ್ಯ ಉಪಾಧ್ಯಕ್ಷರಾಧ ಭವಾನಿಸಿಂಗ ಠಾಕೂರ ಮಾತನಾಡಿ, ಮಳೆ ಬಿಸಿಲು ಎನ್ನದೇ ಬೀದಿ ವ್ಯಾಪಾರಿಗಳ ತಮ್ಮ ಕಾಯಕವನ್ನು ಮುಂದುವರೆಸುವ ಮೂಲಕ ನಮ್ಮೆಲ್ಲರಿಗೂ ಅಗತ್ಯ ಮನೆ ಬಳಕೆಯ ತಿನಸಿ ಮತ್ತು ವಸ್ತುಗಳನ್ನು ನೀಡುತ್ತಾರೆ ಅವರ ಸೇವೆಗೆ ಮಾನ್ಯತೆ ಮತ್ತು ನ್ಯಾಯ ಕಲ್ಪಿಸಲು ಸಂಘ ಕಟಿ ಬದ್ದವಾಗಿದೆ ಎಂದರು.

ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿರುವ ಸಾಧಕರಾದ ಹಿರಿಯ ಪತ್ರಕರ್ತ ಭೀಮಾಶಂಕರ ಫೀರೋಜಾಬಾದ, ಸಂಗನಾಥ ಹಿರೇಮಠ, ಚಂದ್ರಶೇಖರ ನಾಗನಹಳ್ಳಿ, ನ್ಯಾಯವಾದಿಗಳಾದ ಪ್ರಕಾಶ ಸಿಂಗರ, ಕೆಪಿ ಬಿರಾದಾರ, ಸುಧೀಂದ್ರ ಯಕ್ಕಂಚಿ, ನಿವೃತ್ತ ಪೊಲೀಸ ಅಧಿಕಾರಿ ನಾಗಭೂಷಣ, ಹರಿಬಾ ಜಮಾದಾರ, ಬಸವರಾಜ, ಅಶೋಕ ಗಾಯಕವಾಡ, ವಿಶ್ವನಾಥ ಜಾಧವ, ಅರವಿಂದಕರ ಅವರನ್ನು ಸೇವಾರತ್ನ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಮುಖ್ಯ ಅತಿಥಿಗಳಾಗಿ ಮಾಜಿ ಮೇಯರ್ ಭೀಮರೆಡ್ಡಿ ಪಾಟೀಲ, ಡಾ.ಮೈನೋದ್ದೀನ, ನ್ಯಾಯವಾದಿ ಕೆವಿ ಕಲಬುರ್ಗಿ, ಶಾಮ ನಾಟಿಕರ, ರಾಜು ವಾಡೇಕರ್ ರವಿ ರಾಠೋಡ, ಶೇಖರಸಿಂಗ್, ಕೆಪಿ ಬಿರಾದಾರ, ಡಾ.ರೆಡ್ಡ ನ್ ಸೇರಿದಂತೆ ಗಣ್ಯಮಾನ್ಯರು ಪಾಲ್ಗೊಂಡಿದ್ದರು.

ಸಂಘದ ಪದಾಧಿಕಾರಿಗಳಾದ ಅಮೃತ ಸಿ.ಪಾಟೀಲ ಸಿರನೂರ, ರವಿ ಒಂಟಿ, ಜಗತ್ ಸಿಂಗ್, ಮಹಿಬೂಬ ಶಹಾ ದರವೇಜ, ಚಂದ್ರಾಹಸ ಜೀತ್ರೆ, ಸುಮಾ ಕವಲಗಾ, ಬಾಬು ಪರೀಟ್ ಮತ್ತು ಲೋಹಿಸ ಕೋರಿ, ದತ್ತು ಭಾಸಗಿ ಸೇರಿದಂತೆ ಹಲವರಿದ್ದರು.

ಪರಸ್ಪರ ಪ್ರೀತಿ, ಗೌರವದ ಸಂಕೇತ ದಸರಾ ಹಬ್ಬ: ಶಾಸಕ ಎಂ.ವೈ. ಪಾಟೀಲ್



ಅಫಜಲಪುರ

ದಸರಾ ಹಬ್ಬವು ಕೇವಲ ಆಚರಣೆಯಲ್ಲ, ಅದು ಸಮಾಜದಲ್ಲಿ ಪರಸ್ಪರ ಪ್ರೀತಿ, ವಿಶ್ವಾಸ ಹಾಗೂ ಗೌರವವನ್ನು ಬೆಳೆಸುವ ಪವಿತ್ರ ಹಬ್ಬವಾಗಿದೆ. ಹೀಗಾಗಿ ನಾವೆಲ್ಲರೂ ಒಗ್ಗಟ್ಟಿನಿಂದ ಈ ಹಬ್ಬವನ್ನು ಆಚರಿಸೋಣ ಎಂದು ಶಾಸಕ ಎಂ.ವೈ. ಪಾಟೀಲ್ ಹೇಳಿದರು.

ಪಟ್ಟಣದ ಮಹಾಂತೇಶ್ವರ ವಿದ್ಯಾವರ್ಧಕ ಸಂಘದ ಆವರಣದಲ್ಲಿ ಪಾಟೀಲ್ ಕುಟುಂಬದ ವತಿಯಿಂದ ಆಯೋಜಿಸಿದ್ದ ಬನ್ನಿ ವಿನಿಮಯ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ದಸರಾ ಹಬ್ಬಕ್ಕೆ ತನ್ನದೇ ಆದ ಪೌರಾಣಿಕ ಹಿನ್ನೆಲೆಯಿದೆ. ಮಹಾಭಾರತದ ಪ್ರಕಾರ, ಪಾಂಡವರು ವನವಾಸ ಮತ್ತು ಅಜ್ಞಾತವಾಸವನ್ನು ಮುಗಿಸಿ, ಕೌರವರ ವಿರುದ್ಧ ವಿಜಯ ಸಾಧಿಸಿದ ಸಂದರ್ಭವನ್ನು ವಿಜಯದ ಸಂಕೇತವಾಗಿ ಆಚರಿಸಲಾಗುತ್ತದೆ. ಹೀಗಾಗಿ ವಿಜಯದಶಮಿ ಹಬ್ಬವು ಧರ್ಮದ ವಿಜಯವನ್ನು ಸಾರುವ ಮಹತ್ವದ ಹಬ್ಬವಾಗಿದೆ ಎಂದು ತಿಳಿಸಿದರು.

ಪ್ರಸ್ತುತ ರಾಜ್ಯದಾದ್ಯಂತ ಬರಗಾಲದ ಪರಿಸ್ಥಿತಿ ಎದುರಾಗಿದ್ದು, ನಮ್ಮ ಭಾಗದಲ್ಲಿಯೂ ಮುಂಗಾರು ಮತ್ತು ಹಿಂಗಾರು ಮಳೆಯ ಕೊರತೆಯಿಂದ ಬೆಳೆಗಳು ಒಣಗುತ್ತಿವೆ. ಇದರಿಂದ ರೈತರು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದಾರೆ. ಈ ಬಾರಿಯ ದಸರಾ ಹಬ್ಬದ ಸಂದರ್ಭದಲ್ಲಿ ನಾವೆಲ್ಲರೂ ಒಟ್ಟಾಗಿ ಪ್ರಕೃತಿ ಮಾತೆ ಕರುಣೆ ತೋರಿ, ರೈತರು ಹಾಗೂ ಸಾರ್ವಜನಿಕರ ಸಂಕಷ್ಟಗಳನ್ನು ಶೀಘ್ರವಾಗಿ ದೂರ ಮಾಡಲಿ ಎಂದು ಭಗವಂತನಲ್ಲಿ ಶ್ರದ್ಧೆಯಿಂದ ಪ್ರಾರ್ಥಿಸೋಣ ಎಂದು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಸಾನಿಧ್ಯ ವಹಿಸಿದ್ದ ಶ್ರೀ ವಿಶ್ವಾರಾಧ್ಯ ಮಳೇಂದ್ರ ಶಿವಾಚಾರ್ಯರು ಆಶೀರ್ವಚನ ನೀಡಿ, ಮಹಾಭಾರತದ ಪ್ರಕಾರ ಪಾಂಡವರು ತಮ್ಮ ಅಜ್ಞಾತವಾಸದ ಸಂದರ್ಭದಲ್ಲಿ ದಿವ್ಯಾಸ್ತ್ರಗಳನ್ನು ಶಮಿ ವೃಕ್ಷದಲ್ಲಿ ಅಡಗಿಸಿಟ್ಟಿದ್ದರು. ವಿಜಯದಶಮಿಯ ದಿನ ಅವುಗಳನ್ನು ಮರಳಿ ಪಡೆದು ಕೌರವರ ವಿರುದ್ಧ ವಿಜಯ ಸಾಧಿಸಿದರು. ಹೀಗಾಗಿ ಬನ್ನಿ ವಿನಿಮಯವು ವಿಜಯದ ಸಂಕೇತವಾಗಿದೆ ಎಂದು ವಿವರಿಸಿದರು.

ಕಾರ್ಯಕ್ರಮದಲ್ಲಿ ಕೆಕೆಆರ್‌ಟಿಸಿ ಅಧ್ಯಕ್ಷ ಅರುಣಕುಮಾರ ಪಾಟೀಲ್, ಮಂಜೂರ ಅಹ್ಮದ್ ಪಟೇಲ್, ಸಿದ್ದಯ್ಯ ಹಿರೇಮಠ, ಸಂಗ್ರಾಮಗೌಡ ಪಾಟೀಲ್, ಪಪ್ಪು ಪಟೇಲ್, ಪ್ರಕಾಶ್ ಜಮಾದಾರ, ಮತೀನ ಪಟೇಲ್, ಸಿದ್ದಾರ್ಥ್ ಬಸರಗಿಡ, ಸಿದ್ದು ಸಿರಸಗಿ, ರವಿ ಶೆಟ್ಟಿ, ಶರಣು ಕುಂಬಾರ, ಸುಭಾಷ್ ರೂಗಿ, ರೇಣುಕಾ ಸಿಂಗೆ, ರಮೇಶ್ ಪೂಜಾರಿ, ಎಸ್.ಎಸ್. ಪಾಟೀಲ್, ಮಹಾಂತಯ್ಯ ಹಿರೇಮಠ, ಶಿವಾನಂದ ಗಾಡಿ ಸಾಹುಕಾರ, ಕಲ್ಯಾಣಿ ಸಿಂದಗೇರಿ, ಶೀವು ಪದಕಿ, ಮಹಾಲಿಂಗ ಅಂಗಡಿ, ರಾಜು ಪಾಟೀಲ್, ಸುರೇಶಗೌಡ ಶೀರನಾಳ, ಕರೇಪ್ಪ ಪೂಜಾರಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಅ.23 ರಿಂದ ರೋಟರಿ ಕ್ರಿಕೆಟ್ ಪ್ರೀಮಿಯರ್ ಲೀಗ್ ಪ್ರಾರಂಭ : ಸ್ಫೂರ್ತಿ ಧನ್ನೂರ್

ಬೀದರ್,

ರೋಟರಿ ಕ್ಲಬ್ ಆಫ್ ಬೀದರ್ ಸಿಲ್ವರ್ ಸ್ಟಾರ್ ವತಿಯಿಂದ ಆಯೋಜಿಸಲಾಗುತ್ತಿರುವ ರೋಟರಿ ಕ್ರಿಕೆಟ್ ಪ್ರೀಮಿಯರ್ ಲೀಗ್ (ಆರ್‌ಸಿ ಪಿಎಲ್) ಸೀಸನ್-3 ಕ್ರಿಕೆಟ್ ಪಂದ್ಯಾವಳಿಗಳು ಅ.23, 24 ಮತ್ತು 25ರಂದು ನಗರದ ಗುರು ನಾನಕ್ ಎಂಜಿನಿಯರಿಂಗ್ ಕಾಲೇಜಿನ ಕ್ರೀಡಾಂಗಣದಲ್ಲಿ ನಡೆಯಲಿವೆ ಎಂದು ಕ್ಲಬ್‌ನ ಅಧ್ಯಕ್ಷೆ ಸ್ಫೂರ್ತಿ ಧನ್ನೂರ್ ಅವರು ತಿಳಿಸಿದರು.



ನಗರದ ಪತ್ರಿಕಾ ಭವನದಲ್ಲಿ ಬುಧವಾರ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಕಳೆದ ಮೂರು ವರ್ಷಗಳಿಂದ ರೋಟರಿ ಕ್ಲಬ್ ವತಿಯಿಂದ ಆರ್‌ಸಿಪಿಎಲ್ ಪಂದ್ಯಾವಳಿ ಆಯೋಜಿಸಲಾಗುತ್ತಿದೆ. ರೋಟರಿ ಸದಸ್ಯರು ಹಾಗೂ ಯುವಜನರಲ್ಲಿ ಕ್ರೀಡಾ ಮನೋಭಾವ ಬೆಳೆಸುವುದು, ದೈಹಿಕ ಕ್ಷಮತೆ ಮತ್ತು ಆರೋಗ್ಯದ ಬಗ್ಗೆ ಅರಿವು ಮೂಡಿಸುವುದರ ಜತೆಗೆ ಸಮಾಜಮುಖಿ ಸೇವಾ ಕಾರ್ಯಗಳಿಗೆ ಉತ್ತೇಜನ ನೀಡುವುದು ಈ ಟೂರ್ನಿಯ ಪ್ರಮುಖ ಉದ್ದೇಶವಾಗಿದೆ ಎಂದರು.

ಈ ಬಾರಿಯ ಪಂದ್ಯಾವಳಿಯಲ್ಲಿ ಒಟ್ಟು ಎಂಟು ತಂಡಗಳು ಭಾಗವಹಿಸಲಿದ್ದು, 122 ಆಟಗಾರರು ನೋಂದಣಿ ಮಾಡಿಕೊಂಡಿದ್ದಾರೆ. ಐಪಿಎಲ್ ಮಾದರಿಯ ಹರಾಜು ಪ್ರಕ್ರಿಯೆ ಮೂಲಕ ಎಂಟು ತಂಡಗಳ ಮಾಲಕರು ಆಟಗಾರರನ್ನು ತಮ್ಮ ತಂಡಗಳಿಗೆ ಆಯ್ಕೆ ಮಾಡಿ ಕೊಂಡಿದ್ದಾರೆ. ತಂಡಗಳ ಮಾಲಕರು, ರೋಟರಿ ಸದಸ್ಯರು, ಕ್ರೀಡಾಭಿಮಾನಿಗಳು ಹಾಗೂ ದಾನಿಗಳ ಸಹಕಾರದೊಂದಿಗೆ ಪಂದ್ಯಾವಳಿ ನಡೆಯಲಿದೆ ಎಂದು ಅವರು ತಿಳಿಸಿದರು.

ಪಂದ್ಯಾವಳಿಯಲ್ಲಿ ವಿಜೇತ ತಂಡಕ್ಕೆ ಬಸವರಾಜ್ ಪಾಟೀಲ್ ಅವರ ಪ್ರಾಯೋಜಕತ್ವದಲ್ಲಿ ಚಾಂಪಿಯನ್ ಟ್ರೋಫಿ ಹಾಗೂ 50 ಸಾವಿರ ರೂ. ನಗದು ಬಹುಮಾನ ನೀಡಲಾಗುವುದು.

ಮಾಜಿ ಸಚಿವ ರಾಜಶೇಖರ್ ಪಾಟೀಲ್, ವಿಧಾನ ಪರಿಷತ್ ಸದಸ್ಯ ಚಂದ್ರಶೇಖರ್ ಪಾಟೀಲ್ ಹಾಗೂ ಭೀಮರಾವ್ ಪಾಟೀಲ್ ಅವರು ಪ್ರಾಯೋಜ ಕತ್ವದ ಮೂಲಕ ಸಹಕರಿಸಿದ್ದಾರೆ ಎಂದು ಅವರು ಹೇಳಿದರು.

ರನ್ನರ್‌ಅಪ್ ತಂಡಕ್ಕೆ ಟ್ರೋಫಿ ಹಾಗೂ 25 ಸಾವಿರ ರೂ. ನಗದು ಬಹುಮಾನ ನೀಡಲಾಗುವುದು. ಈ ಬಹುಮಾನದ ಪ್ರಾಯೋಜಕತ್ವವನ್ನು ತಾಳಂಪಳ್ಳಿ ಗ್ರೂಪ್‌ನ ಮಾಲಕ ಸಂತೋಷ್ ತಾಳಂಪಳ್ಳಿ ಅವರು ವಹಿಸಿಕೊಂಡಿದ್ದಾರೆ ಎಂದು ಅವರು ಮಾಹಿತಿ ನೀಡಿದರು.

ಮೊದಲ ಆವೃತ್ತಿಯಲ್ಲಿ ಉಳಿದ ಹಣದಿಂದ ಸುಮಾರು 7 ಲಕ್ಷ ರೂ. ಕ್ಯಾನ್ಸ ರ್ ರೋಗಿಗಳ ಚಿಕಿತ್ಸೆ ಗೆ ವಿನಿಯೋಗಿಸಲಾಗಿದೆ. ಎರಡನೇ ಆವೃತ್ತಿಯಲ್ಲಿ ಉಳಿದ 15 ಲಕ್ಷಕ್ಕೂ ಅಧಿಕ ಮೊತ್ತವನ್ನು ಜಿಲ್ಲೆಯ ಬಡ ಹಾಗೂ ಪ್ರತಿಭಾವಂತ ವಿದ್ಯಾರ್ಥಿಗಳ ಶೈಕ್ಷಣಿಕ ನೆರವಿಗೆ ಬಳಸಲಾಗಿದೆ. 50 ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ವಿದ್ಯಾನಿಧಿ ನೀಡುವ ಮೂಲಕ ಶಿಕ್ಷಣಕ್ಕೆ ನೆರವಾಗಿದೆ. ಈ ಬಾರಿ ಹೆಣ್ಣು ಮಗುವನ್ನು ಸಬಲೀಕರಣಗೊಳಿಸಿ ಬೇಟಿ ಬಚಾವೋ, ಬೇಟಿ ಪಡಾವೋ ಎಂಬ ಆಶಯದೊಂದಿಗೆ ಪಂದ್ಯಾವಳಿ ಆಯೋಜಿಸಲಾಗುತ್ತಿದೆ. ಈ ಆವೃತ್ತಿಯಲ್ಲಿ ಉಳಿಯುವ ಹಣವನ್ನು ಹೆಣ್ಣು ಮಕ್ಕಳ ಶಿಕ್ಷಣ, ಸಬಲೀಕರಣ ಹಾಗೂ ಅವರ ಭವಿಷ್ಯ ಉತ್ತಮಗೊಳಿಸುವ ಸಮಾಜಮುಖಿ ಕಾರ್ಯಕ್ರಮಗಳಿಗೆ ವಿನಿಯೋಗಿಸಲು ನಿರ್ಧರಿಸಲಾಗಿದೆ ಎಂದು ಅವರು ತಿಳಿಸಿದರು. ಈ ಸುದ್ದಿಗೋಷ್ಠಿಯಲ್ಲಿ ರೋಟರಿ ಕ್ಲಬ್ ಆಫ್ ಬೀದರ್ ಸಿಲ್ವರ್ ಸ್ಟಾರ್‌ನ ಉಪಾಧ್ಯಕ್ಷ ಮಂಜುನಾಥ್ ಹೂಗಾರ್, ಕಾರ್ಯದರ್ಶಿ ಅಭಿಷೇಕ್ ಚಿಂತಾಮಣಿ, ಕ್ರಿಕೆಟ್ ಪಂದ್ಯಾವಳಿಯ ನಿರ್ದೇಶಕ ಸಂಗಮೇಶ್ ವಡಗಾವೆ, ನಿರ್ದೇಶಕ ಸಚಿನ್ ಕೊಳ್ಳೂರು ಹಾಗೂ ತಂಡದ ಮಾಲೀಕ ಕಿರಣ್ ಬೆಲ್ದಾಳೆ ಉಪಸ್ಥಿತರಿದ್ದರು.

ಕಲಬುರಗಿ:ಬೌದ್ಧ ವಿಧಿ ಸಂಸ್ಕಾರ ಮತ್ತು ಮಾರ್ಗದರ್ಶಕ ಪುಸ್ತಕ ಲೋಕಾರ್ಪಣೆ



ಕಲಬುರಗಿ,

ನಗರ ಹೊರವಲಯದ ಬುದ್ಧ ವಿಹಾರದಲ್ಲಿ ಆಯೋಜಿಸಿದ್ದ ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ರವರು ಬೌದ್ಧಧಮ್ಮ ಸ್ವೀಕರಿಸಿದ 70ನೇ ಧಮ್ಮ ಚಕ್ರ ಪ್ರವರ್ತನ ದಿನಾಚರಣೆ ಕಾರ್ಯಕ್ರಮದಲ್ಲಿ ಮಹೇಂದ್ರ ಫೌಂಡೇಶನ್ ವತಿಯಿಂದ ಪ್ರಕಾಶನಗೊಂಡ ವಿಜಯ ಕಾಂಬಳೆ ಬರೆದ ಬೌದ್ಧ ವಿಧಿ ಸಂಸ್ಕಾರ ಮತ್ತು ಮಾರ್ಗದರ್ಶಕ ಎಂಬ ಮರಾಠಿ ಭಾಷೆಯ ಪುಸ್ತಕವನ್ನು ರಾಜ್ಯಸಭೆಯ ವಿರೋಧ ಪಕ್ಷದ ನಾಯಕರಾದ ಮಲ್ಲಿಕಾರ್ಜುನ ಖರ್ಗೆ ಲೋಕಾರ್ಪಣೆ ಮಾಡಿದರು.

ಈ ಸಂದರ್ಭದಲ್ಲಿ ವಿಧಾನ ಪರಿಷತ್ ಸದಸ್ಯರುಗಳಾದ ತಿಪ್ಪಣ್ಣಪ್ಪ ಕಮಕನೂರ್, ಜಗದೇವ ಗುತ್ತೇದಾರ್, ವಸಂತ್ ಕುಮಾರ್, ಜೆಸ್ಕಾಂ ಅಧ್ಯಕ್ಷರಾದ ಪ್ರವೀಣ್ ಕುಮಾರ್ ಪಾಟೀಲ್ ಹರವಾಳ, ಕೆಪಿಸಿಸಿ ಕಲಬುರಗಿ ಜಿಲ್ಲಾಧ್ಯಕ್ಷರಾದ ಡಾ. ಕಿರಣ್ ದೇಶಮುಖ್, ವಿಧಾನ ಪರಿಷತ್ ಮಾಜಿ ಸದಸ್ಯರಾದ ಅರವಿಂದ ಅರಳಿ, ಶಾಂತಪ್ಪ ಸೂರನ್, ಸಾಹಿತಿ ಡಾ.ನಟರಾಜ್ ಹುಳಿಯಾರ್, ಡಾ. ಚಂದ್ರಶೇಖರ್ ದೊಡ್ಡಮನಿ, ಅನಿಲಕುಮಾರ ಸುಗಂಧಿ ಮತ್ತು ಮಿಲಿಂದ್ ಗುರೂಜಿ ಮುಂತಾದವರು ಉಪಸ್ಥಿತರಿದ್ದರು

ದೇಶದ ಆಂತರಿಕ ಭದ್ರತೆಗೆ ಪೊಲೀಸರ ಕೊಡುಗೆ ಅಪಾರ : ಸಿಇಓ ಗಿತ್ತೆ ಮಾಧವ್ ವಿಠಲರಾವ್

ಬೀದರ್ :

ದೇಶದಲ್ಲಿ ಶಾಂತಿ, ಸುವ್ಯವಸ್ಥೆ ಜೊತೆಗೆ ಆಂತರಿಕ ಭದ್ರತೆಗಾಗಿ ಪೊಲೀಸರು ಹಗಲಿರುಳು ಶ್ರಮಿಸುವ ಮೂಲಕ ಅಪಾರ ಕೊಡುಗೆ ನೀಡಿದ್ದಾರೆ ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಗಿತ್ತೆ ಮಾಧವ್ ವಿಠ್ಠಲರಾವ್ ಅವರು ತಿಳಿಸಿದರು.

ನಗರದ ಪೊಲೀಸ್ ಕವಾಯತು ಮೈದಾನದಲ್ಲಿ ಬುಧವಾರ ನಡೆದ ಪೊಲೀಸ್ ಹುತಾತ್ಮರ ದಿನಾಚರಣೆ ಕಾರ್ಯಕ್ರಮದಲ್ಲಿ ಪೊಲೀಸ್ ಹುತಾತ್ಮರ ಸ್ಮಾರಕಕ್ಕೆ ಹೂದಂಡೆ ಸಮರ್ಪಿಸುವ ಮೂಲಕ ಗೌರವ ಸಲ್ಲಿಸಿ ಅವರು ಮಾತನಾಡಿದರು.



ಪೊಲೀಸರು ನಿಷ್ಠೆಯಿಂದ ಕೆಲಸ ಮಾಡುತ್ತಿರುವುದರಿಂದ ದೇಶದ ಜನ ನೆಮ್ಮದಿಯಿಂದ ಇದ್ದೇವೆ. ಪ್ರತಿ ವರ್ಷ ಸಾವಿರಾರು ಪೊಲೀಸರು ಕರ್ತವ್ಯದ ಸಮಯದಲ್ಲಿ ಹುತಾತ್ಮರಾಗುತ್ತಾರೆ. ಅವರ ಸ್ಮರಣೆಯನ್ನು ಕೇವಲ ಒಂದು ದಿನಕ್ಕೆ ಸೀಮಿತಗೊಳಿಸಬಾರದು. ಪೊಲೀಸ್ ಕರ್ತವ್ಯ ನಿಷ್ಠೆಗೆ ಅವರ ಕುಟುಂಬದ ಸದಸ್ಯರ ಸಹಕಾರ ಸಾಕಷ್ಟಿದೆ. ಪೊಲೀಸ್ ಹುತಾತ್ಮರ ಮಕ್ಕಳಿಗೆ ತಮ್ಮ ಶಾಲೆಯಲ್ಲಿ ಕಡಿಮೆ ಶುಲ್ಕದಲ್ಲಿ ಶಿಕ್ಷಣ ನೀಡಲಾಗುವುದು ಎಂದರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪ್ರದೀಪ್ ಗುಂಟಿ ಅವರು ಮಾತನಾಡಿ, 1959 ರ ಅ.21ರಂದು ಲಡಾಕ್ ಪ್ರದೇಶದಲ್ಲಿ ಎಸ್ ಐ ಕರ್ಣಂ ಸಿಂಗ್ ನೇತೃತ್ವದ 21 ಜನ ಕೇಂದ್ರ ಪೊಲೀಸ್ ಮೀಸಲು ಪಡೆಯ ಸಿಬ್ಬಂದಿಗಳ ತಂಡ ಗಸ್ತು ತಿರುಗುವ ಸಂದರ್ಭದಲ್ಲಿ ಚೀನಾ ಸೈನ್ಯ ಏಕಾಏಕಿ ದಾಳಿ ನಡೆಸಿತ್ತು. ಈ ಸಮಯದಲ್ಲಿ ವೀರಾವೇಶದಿಂದ ಹೋರಾಡಿ ನಮ್ಮ 10 ಜನ ಪೊಲೀಸ್ ಸಿಬ್ಬಂದಿಗಳು ಮಡಿದರು. ಹಾಗೆಯೇ 11 ಜನ ಒತ್ತೆಯಾಳಾದರು. ಅವರ ತ್ಯಾಗ, ಬಲಿದಾನದ ಸಂಕೇತವಾಗಿ ಪೊಲೀಸ್ ಹುತಾತ್ಮರ ದಿನಾಚರಣೆ ಮಾಡಲಾಗುತ್ತಿದೆ ಎಂದು ತಿಳಿಸಿದ ಅವರು, ಕಳೆದ ಒಂದು ವರ್ಷದಲ್ಲಿ ದೇಶದ ವಿವಿಧ ರಾಜ್ಯಗಳಲ್ಲಿ ಹುತಾತ್ಮರಾದ ಪೊಲೀಸರ ಹೆಸರುಗಳನ್ನು ವಾಚಿಸಿದರು.

ಈ ಕಾರ್ಯಕ್ರಮದಲ್ಲಿ ಪೊಲೀಸ್ ಅಧೀಕ್ಷಕರು ಮತ್ತು ಹೆಚ್ಚುವರಿ ಪೊಲೀಸ್ ಅಧೀಕ್ಷಕರು ಸೇರಿದಂತೆ ಇತರೆ ಪೊಲೀಸ್ ಅಧಿಕಾರಿ, ಸಿಬ್ಬಂದಿ ಮತ್ತು ಗಣ್ಯರಿಂದ ಹುತಾತ್ಮರ ಸ್ಮಾರಕಕ್ಕೆ ಹೂದಂಡೆ ಸಮರ್ಪಣೆ ಮಾಡಿ ಗೌರವ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಚಂದ್ರಕಾಂತ್ ಪೂಜಾರಿ, ಬೀದರ್ ಡಿವೈಎಸ್ಪಿ ದೂದಪೀರ್ ಮುಲ್ಲಾ, ಹುಮನಾಬಾದ್ ಡಿವೈಎಸ್ಪಿ ಮಡಿವಾಳಪ್ಪಾ, ಡಿಆರ್‌ಡಿಎಸ್ಪಿ ಶರಣಪ್ಪ ಸೇರಿದಂತೆ ಇತರೆ ಪೊಲೀಸ್ ಅಧಿಕಾರಿಗಳು, ಸಿಬ್ಬಂದಿಗಳು, ನಗರದ ಗಣ್ಯರು ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಒಂದನೇಯ ಪುಟದಿಂದ

ಈಶಾನ್ಯ ಕ್ಷೇತ್ರದ ಶಿಕ್ಷಕರ ಚುನಾವಣೆ: ಕಾಂಗ್ರೆಸ್ ಅಭ್ಯರ್ಥಿ ಗೆಲುವು ನಿಶ್ಚಿತ

ಎಸ್ ಮತ್ತು ಬಿಜೆಪಿ ಕುತಂತ್ರದ ಬಗ್ಗೆ ದೇಶದ ಜನತೆ ಜಾಗೃತಿರಾಗಿ ಸಿಜೆಪಿ ಹಾಗೂ ದೇಶದ ಯುವ ಜನರು ಬಿಜೆಪಿ ಬಿಜೆಪಿ ಪ್ರತಿಭಟನೆಗೆ ಬೀದಿಗೆ ಇಳಿದಿದ್ದಾರೆ ಎಂದರು. ಬಿಜೆಪಿ ಈ ಹಿಂದೆ ರಾಮನ ಹಾಗೂ ಧರ್ಮದ ಹೆಸರಲ್ಲಿ ರಾಜಕೀಯ ಮಾಡಿ ಮತ ಪಡೆದಿದ್ದು,ಚುನಾವಣೆ ಆಯೋಗ ತನ್ನ ಕೈಗೊಂಬೆಯಂತೆ ಮಾಡಿಕೊಂಡು ಈಗ ಎಸ್ ಐ ಆರ್ ಮೂಲಕ ವೋಟ್ ಚೋರಿ ಹೆಸರಲ್ಲಿ ಬಿಜೆಪಿ ಸರಕಾರ ಅಧಿಕಾರ ಬರುವ ಕುತಂತ್ರ ನಡೆಸಿದೆ. ಕಾಂಗ್ರೆಸ್ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಎಲ್ಲರೂ ಸಮಾನರು ಎಂದು ಭಾವನೆಯ ಸಿದ್ದಾಂತ ಹೊಂದಿದ್ದರೆ ಬಿಜೆಪಿ ಧರ್ಮ ಜಾತಿ ಹೆಸರಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮೊಟುಕುಗೊಳಿಸಲಾಗುತ್ತದೆ ಎಂದರು.

ವಿಜಿರಾಮ್ ಜೀ ಯೋಜನೆ: ಕೂಲಿ ಪಾವತಿಯಲ್ಲಿ ಅನ್ಯಾಯ ಕ್ರಮಕ್ಕೆ ಒತ್ತಾಯ

ಬೆಳೆಬಾರದೇ ರೈತರುಗಳು ತೀವ್ರ ಸಂಕಷ್ಟಕ್ಕೀಡಾದ ಸಂದರ್ಭದಲ್ಲಿ ಕುಟುಂಬ ನಿರ್ವಹಣೆಗಾಗಿ ಗ್ರಾಮ ಪಂಚಾಯತಿಯ ವ್ಯಾಪ್ತಿಯಲ್ಲಿ ಕೈಗೊಳ್ಳುವ ನರೇಗಾ ವಿಜಿರಾಮ್ ಜೀ ಯೋಜನೆಯಡಿಯಲ್ಲಿ ಕಾಮಗಾರಿ ನಿರ್ವಹಣೆಗೆ ಕೂಲಿ ಮಾಡಲು ತೆರಳುತ್ತಾರೆ. ಇಂತಹ ತುರ್ತು ಪರಿಸ್ಥಿತಿಗಳಲ್ಲಿ ಕೆಲಸ ನಿರ್ವಹಿಸಿದ ಮಾನವ ದಿನಗಳಿಗನುಗುಣವಾಗಿ ಸರ್ಕಾರದ ನಿಯಮದಂತೆ ನೀಡಬೇಕಾದ ಕನಿಷ್ಠ ವೇತನವನ್ನು ಪಾವತಿಸದೇ ಸರ್ಕಾರದ ನಿಯಮದಂತೆ ಪಾವತಿಸಬೇಕಾದ ದಿನಕ್ಕೆ 380 ರೂ ಗಳನ್ನು ನೀಡಬೇಕಾದ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಕೂಲಿಕಾರ್ಮಿಕರಿಗೆ ದಿನಕ್ಕೆ ಕೇವಲ 250 ರೂ. ಪಾವತಿಸಿ ಕೂಲಿಕಾರರ ಹೊಟ್ಟೆಗೆ ಹೊಡೆಯುತ್ತಿದ್ದಾರೆ ಎಂದು ದೂರಿದರು.

ಅಷ್ಟೇ ಅಲ್ಲದೇ ಬಿಜನಗೇರಾ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಕಾಮಗಾರಿ ನಿರ್ವಹಿಸುವ ಸ್ಥಳಕ್ಕೆ ತೆರಳಬೇಕೆಂದರೆ ಪ್ರತಿನಿತ್ಯ ರೂ. 50ಗಳಷ್ಟು ಆಟೋ ಬಾಡಿಗೆಗೆ ವೆಚ್ಚವಾಗುತ್ತದೆ. ಈಗ ಪಿ.ಡಿ.ಓ ಅವರು ರೂ. 250ಗಳನ್ನು ನೀಡುವುದರಿಂದ ರೂ. 50-ಗಳು ಖರ್ಚಾದರೂ ಉಳಿದ ರೂ. 200ಗಳಲ್ಲಿ ಜೀವನ ನಿರ್ವಹಣೆ ಹೇಗೆ ಸಾಧ್ಯವಾಗುತ್ತದೆ ಎಂದು ತಮಗೆ ತಿಳಿಸಲು ಬಯಸುತ್ತೇವೆ. ಹಾಗೆಯೇ ಕಾಮಗಾರಿ ನಡೆಯುವ ಸ್ಥಳಗಳಿಗೆ ಸ್ಥಾನಿಕ ಪರಿಶೀಲನೆಗೂ ತೆರಳದೇ ಕೇವಲ ತಾಂತ್ರಿಕ ಅಭಿಯಂತರರೊಬ್ಬರ ಮಾತಿಗೆ ಕಿವಿಗೊಡುವ ಪಿ.ಡಿ.ಓ ರವರು ಅವರು ಹೇಳಿದಂತೆ ಕೇಳುತ್ತ ರೂ. 380ರ ಬದಲಿಗೆ ರೂ. 250ಗಳನ್ನಷ್ಟೇ ಪಾವತಿಸುತ್ತ ಕೂಲಿಕಾರರಿಗೆ ಅನ್ಯಾಯವೆಸಗುತ್ತಿದ್ದಾರೆ.ತಕ್ಷಣವೇ ಇವರನ್ನು ಅಮಾನತಿ ಮಾಡಿ ನ್ಯಾಯ ಒದಗಿಸಬೇಕು ಎಂದು ಒತ್ತಾಯಿಸಿದರು.

ಸಮಾಜದ ಶಾಂತಿಗೆ ಪೊಲೀಸರ ಕಾರ್ಯ ಶ್ಲಾಘನೀಯ

ಇಲಾಖೆಯ ವಿವಿಧ ವಿಭಾಗಗಳ ಅಧಿಕಾರಿಗಳು, ಸಿಬ್ಬಂದಿ, ಹುತಾತ್ಮ ಪೊಲೀಸ್ ಸಿಬ್ಬಂದಿಯ ಕುಟುಂಬದ ಸದಸ್ಯರು ಹಾಗೂ ಗಣ್ಯರು ಉಪಸ್ಥಿತರಿದ್ದು, ವೀರಯೋಧರಿಗೆ ಗೌರವ ನಮನ ಸಲ್ಲಿಸಿದರು.

ಗಜಲ್ ಬರೆಯಬೇಕೆಂಬ ಆಸೆ



ಚಿತ್ತಾಪುರ,

ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಚಿತ್ತಾಪುರ ಹಾಗೂ ಸುವನಾ ಪ್ರಕಾಶನ ಕಲಬುರ್ಗಿ ಇವರ ಸಂಯುಕ್ತ ಆಶ್ರಯದಲ್ಲಿ ಚಿತ್ತಾಪೂರಿನ ವರುಣ ನಗರದ ಶರಣಬಸವೇಶ್ವರ ದೇವಸ್ಥಾನದ ಆವರಣದಲ್ಲಿ ರವಿವಾರ ರಂದು ನಡೆದ ಉಮೇಶ್ ಬಾಬು ಎಂ ಸಾಸಾಬಾಳ್ ವಿರಚಿತ ಮೌನಡಂಗುರ ಕವನ ಸಂಕಲನ, ಭಾವ ಬಂಧುರ ಮತ್ತು ಭಾವಭ್ರಂಗ ಗಜಲ್ ಸಂಕಲನ ಕಾವ್ಯ ಕೃತಿಗಳ ಲೋಕಾರ್ಪಣಾ ಸಮಾರಂಭದಲ್ಲಿ 96ರ ಹರೆಯದ ಹಿರಿಯ ಮಕ್ಕಳ ಸಾಹಿತಿ ಎ. ಕೆ. ರಾಮೇಶ್ವರ ರವರು ಕೃತಿ ಬಿಡುಗಡೆ ಮಾಡಿ ಮಾತನಾಡುತ್ತಾ ಸಾಹಿತಿ ಉಮೇಶ್ ಬಾಬು ರವರ ಗಜಲ್ ಗಳು ಓದಿದಾಗ ನನಗನ್ನಿಸಿದ್ದು ನಾನು ಮಕ್ಕಳ ಸಾಹಿತಿಯಾಗಿ ಇಷ್ಟು ವರ್ಷ ಬರವಣಿಗೆ ಮಾಡಿದರು ಕೂಡ ಗಜಲ್ ಬರೆಯಬೇಕೆಂಬ ಆಸೆಯಾಗುತ್ತಿದೆ ಎಂದು ಹೇಳಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾ ಅಧ್ಯಕ್ಷ ವಿಜಯಕುಮಾರ್ ಪಾಟೀಲ್ ತೇಗಲತಿಪ್ಪಿ ಯವರು ಮಾತನಾಡುತ್ತಾ ಪ್ರಾಚೀನ ವಿಶ್ವವಿದ್ಯಾಲಯವಿರುವ ನಾಗಾವಿ ಘಟಿಕ ಸ್ಥಾನ ಇದು ಸಾಮಾನ್ಯವಾದ ನೆಲವಲ್ಲ ಇದು ಪ್ರಾಚೀನ ಕಾಲದಲ್ಲಿಯೇ ಸಾಹಿತ್ಯಿಕವಾಗಿ ಉಚ್ಛ್ರಾಯ ಸ್ಥಿತಿಯಲ್ಲಿರುವಂತಹ ಪುಣ್ಯಭೂಮಿ, ಹಾಗೆಯೇ ಹಲವಾರು ದಶಕಗಳಿಂದ ಸಾಹಿತ್ಯ ಪರಿಷತ್ತಿನ ಅನೇಕ ಚಟುವಟಿಕೆಗಳು ಇಲ್ಲಿ ನಡೆದಿವೆ ಎಂದು ನುಡಿಯುತ್ತಾ ಉಮೇಶ್ ಬಾಬುರವರು ರಚಿಸಿರುವ ಈ ಕೃತಿಗಳು ಬಹಳ ಪ್ರೌಢ ಮಟ್ಟದ ಕವನ ಹಾಗೂ ಗಜಲ್ ಗಳಾಗಿವೆ ಎಂದು ನುಡಿದರು.

ಮೌನದಂಗೂರ ಮೌನ ಡಂಗುರ ಕೃತಿ ಪರಿಚಯ ಮಾಡಿದ ಹಿರಿಯ ಸಾಹಿತಿಗಳಾದ ಲಿಂಗಾರೆಡ್ಡಿ ಸೇರಿ ಸೇಡಂ ರವರು ಮಾತನಾಡುತ್ತಾ ಈ ಕೃತಿಯ ಹೆಸರಾದ ಮೌನ ಡಂಗುರದ ಹೆಸರಿನ ಅರ್ಥಪೂರ್ಣತೆಯನ್ನು ವಿವರಿಸುತ್ತಾ ಕೃತಿಯಲ್ಲಿ ಲೇಖಕರು ತಮ್ಮ ತಂದೆಗೆ ಅರ್ಪಣೆ ಮಾಡಿ ಬರೆದ ಕವನದ ವಿವರಣೆಯನ್ನು ಕೊಡುತ್ತಾ ತುಂಬಾ ಮೆಚ್ಚುಗೆ ವ್ಯಕ್ತಪಡಿಸಿದರು.

ಇನ್ನೆರಡು ಗಜಲ್ ಕೃತಿಗಳ ಪರಿಚಯ ಮಾಡಿಕೊಟ್ಟ ಖ್ಯಾತ ಕವಿ/ ಸಾಹಿತಿ/ ಪತ್ರಕರ್ತ ಮಹಿಪಾಲರೆಡ್ಡಿ ಮುನ್ನೂರು ಮಾತನಾಡುತ್ತಾ ನೋಡಿದರೆ ಸಾಧಾರಣ ವ್ಯಕ್ತಿತ್ವದ ಚಿತ್ರ ಕಲಾವಿದನ ಆಂತರ್ಯದಲ್ಲಿ ಇಂತಹ ಅದ್ಭುತ ರಸಿಕತೆಯ ಕವಿ ಮನಸ್ಸು ಅಡಗಿದೆ ಎಂದು ಊಹಿಸಲೂ ಅಸಾಧ್ಯ ಅಂತಹ ಅತ್ಯುತ್ತಮ ಮಟ್ಟದ ಗಜಲ್ ಗಳನ್ನು ರಚಿಸಿದ್ದಾರೆ ಎಂದು ಒಂದೊಂದು ಗಜಲ್ ಗಳನ್ನು ಬಿಚ್ಚಿಟ್ಟು, ಕೃತಿಗಳನ್ನು ಯಾವಾಗ ಕೊಂಡು ಓದೋಣ ಎನ್ನುವ ಹಂಬಲವನ್ನು ಸಭಿಕರ ಮನದಲ್ಲಿ ಮೂಡುವಂತೆ ಮಾಡಿದರು.

ಕಾರ್ಯಕ್ರಮದ ಸಾನಿಧ್ಯವನ್ನು ದಿಗ್ಗಾಂವ ಹಂಚಗ್ರಹ ಹಿರೇಮಠದ ಸಿದ್ದವೀರ ಶಿವಾಚಾರ್ಯರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ನಿವೃತ್ತ ಶಿಕ್ಷಕ ಸುಧಾಕರ್ ರಾವ್ ಸರಾಫ ಆಗಮಿಸಿದ್ದರು.

ಕೃತಿಗಳ ಲೋಕಾರ್ಪಣೆಯನ್ನು ಖ್ಯಾತ ಚಿತ್ರಕಲಾವಿದ ನಾಡೋಜ ಡಾ.ಜೆ ಎಸ್. ಖಂಡೇರಾವ ಹಾಗೂ ಮಕ್ಕಳ ಸಾಹಿತಿ ಎ.ಕೆ. ರಾಮೇಶ್ವರ್ ಖ್ಯಾತ ನ್ಯಾಯವಾದಿ ಚಂದ್ರಶೇಖರ್ ಅವಂಟಿ ಮಾಡಿದರು.

ಕೃತಿಗಳ ಪರಿಚಯ ಮಾಡಿದಂತಹ ಖ್ಯಾತ ಕವಿ ಸಾಹಿತಿಗಳಾದ ಸೇಡಂನ ಲಿಂಗಾರೆಡ್ಡಿ ಸೇರಿ ಮತ್ತು ಮಹಿಪಾಲ ರೆಡ್ಡಿ ಮುನ್ನೂರ ಕೃತಿಗಳ ಪರಿಚಯ ಮಾಡಿದರು.

ಬಿಎಆರ್ಸಿ ನಿವೃತ್ತ ಆಡಳಿತಾಧಿಕಾರಿ ರಾಮಕೃಷ್ಣ ಕುಲಕರ್ಣಿ, ಸಾಹಿತಿ ಎ.ಕಮಲಾಕರ್ ಸುರಪುರ ಉಪಸ್ಥಿತರಿದ್ದರು.

ಕಾರ್ಯಕ್ರಮದ ಕೇಂದ್ರಬಿಂದುವಾದ ಚಿತ್ರ ಕಲಾವಿದ ಸಾಹಿತಿ ಉಮೇಶ್ ಬಾಬು ಎಮ್ ಸಾಸಾ ಬಾಳ್, ತಮ್ಮ ಅನಿಸಿಕೆ ಹಂಚಿಕೊಂಡರು. ನಿವೃತ್ತ ಶಿಕ್ಷಕ ದೇವಿಂದ್ರಪ್ಪ ಶಾಬಾದಕರ್ ಲೇಖಕರ ಪರಿಚಯ ಮಾಡಿದರು.


ಪ್ರಸ್ತಾವಿಕ ನುಡಿಯನ್ನು ಶಂಕರ ಬಿರಾದಾರ್ ನುಡಿದರು. ಸಂಗಮೇಶ್ವರ ರೋಣದ ಸ್ವಾಗತ ಕೋರಿದರು, ಕಾರ್ಯಕ್ರಮದ ನಿರೂಪಣೆಯನ್ನು ಸಾಧನ ನಟರಾಜ್ ಶಿಲ್ಪಿ ಮಾಡಿದರೆ, ಅಧ್ಯಕ್ಷತೆಯನ್ನು ಚಿತ್ತಾಪುರ ತಾಲ್ಲೂಕ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ವೀರಭದ್ರಪ್ಪ ಗುರುಮಿಟಕಲ್ ವಹಿಸಿದ್ದರು.

ಕಾರ್ಯಕ್ರಮದಲ್ಲಿ ದಿಗ್ಗಾಂವ್ ಗ್ರಾಮದ ಅನೇಕ ಹಿರಿಯ ಹಾಗೂ ಯುವ ಮುಖಂಡರು ಕಲಬುರ್ಗಿ ನಗರದಿಂದ ಆಗಮಿಸಿದ ಹಿರಿಯ ಹಾಗೂ ಯುವ ಚಿತ್ರ/ಶಿಲ್ಪ ಕಲಾವಿದರು, ಮೊಗಲಾ, ಸಾತನೂರು, ದಿಗ್ಗಾವ್, ಗ್ರಾಮದ ಅನೇಕ ಹಿತೈಷಿಗಳು ಹಾಗೂ ಚಿತ್ತಾಪುರ ನಗರದ ಅನೇಕ ಗಣ್ಯರು ಮತ್ತು ಲೇಖಕರಾದ ಉಮೇಶ್ ಬಾಬು ರವರ ಪರಿವಾರದವರೊಂದಿಗೆ ಅನೇಕರು ಉಪಸ್ಥಿತರಿದ್ದರು.

ಶರಣಬಸವೇಶ್ವರ ದೇವಸ್ಥಾನ ಸಮಿತಿಯ ಪದಾಧಿಕಾರಿ ಕೋಟೇಶ್ವರ ರೇಶ್ಮಿ ಅವರಿಗೆ ಸನ್ಮಾನಿಸಲಾಯಿತು. ಹಾಗೂ ಸಾಹಿತಿ ಉಮೇಶ್ ಬಾಬುರವರ ಅನೇಕ ಅಭಿಮಾನಿಗಳು ಸನ್ಮಾನ, ಸತ್ಕಾರ, ಮಾಡಿದರು.

ಪತ್ರಿಕೆ ಓದುವ ಹವ್ಯಾಸ ಬೆಳಸಿಕೊಳ್ಳಿ

ಕಲಬುರಗಿ ನಟರಾಜ್ ಹುಳಿಯಾರ್ ಅವರ ಡಾಕ್ಟರ್ ಸಾಹೇಬ್ ಕೃತಿಯ ಎರಡನೇ ಮುದ್ರಣ ಬಿಡುಗಡೆ



ಕಲಬುರಗಿ

ಡಾ. ರಾಮ ಮನೋಹರ ಲೋಹಿಯಾ ಅವರು ಭಾರತದಲ್ಲಿ ಸಮತಾ ಸಮಾಜ ನಿರ್ಮಾಣದ ಕನಸು ಹೊತ್ತ ಬಹುದೊಡ್ಡ ಹೋರಾಟಗಾರರಾಗಿದ್ದರು ಎಂದು ರಾಜ್ಯ ಯೋಜನಾ ಆಯೋಗದ ಉಪಾಧ್ಯಕ್ಷರು ಹಾಗೂ ಶಾಸಕರಾದ ಬಿ.ಆರ್. ಪಾಟೀಲ್ ಹೇಳಿದರು. ನಗರದ ರಂಗಾಯಣದಲ್ಲಿ ಮಂಗಳವಾರ ಲೇಖಕ ನಟರಾಜ್ ಹುಳಿಯಾರ್ ಅವರು ರಚಿಸಿದ ಡಾ. ರಾಮ ಮನೋಹರ ಲೋಹಿಯಾ ಅವರ ಜೀವನಯಾನವನ್ನು ಪರಿಚಯಿಸುವ ಡಾಕ್ಟರ್ ಸಾಹೇಬ್ ಕೃತಿಯ ಎರಡನೇ ಮುದ್ರಣವನ್ನು ಬಿಡುಗಡೆಗೊಳಿಸಿ ಅವರು ಮಾತನಾಡಿದರು.

ಲೋಹಿಯಾ ಅವರು ನಿಷ್ಠುರ ಚಿಂತಕರಾಗಿದ್ದರು. ''ನಾನು ಇರುವವರೆಗೆ ನನ್ನ ಮಾತುಗಳನ್ನು ಯಾರೂ ನಂಬುವುದಿಲ್ಲ. ಆದರೆ ನಾನು ಸತ್ತ ಮೇಲೆ ನನ್ನ ವಿಚಾರಗಳನ್ನು ಎಲ್ಲರೂ ನಂಬುತ್ತಾರೆ'' ಎಂದು ಅವರೇ ಹೇಳಿದ್ದರು. ಗಾಂಧೀಜಿಯವರೊಂದಿಗೆ ಗುರುತಿಸಿಕೊಂಡು ಲೋಹಿಯಾ ಚಿಂತನೆಗಳನ್ನು ಪ್ರತಿಪಾದಿಸಿದ ಅವರು ಸಾಮಾಜಿಕ ಪರಿವರ್ತನೆಗೆ ಮಹತ್ವದ ಕೊಡುಗೆ ನೀಡಿದ್ದಾರೆ ಎಂದು ಹೇಳಿದರು.

ವಿಕೇಂದ್ರೀಕೃತ ಆಡಳಿತ ವ್ಯವಸ್ಥೆಯಲ್ಲಿ ನಂಬಿಕೆ ಹೊಂದಿದ್ದ ಲೋಹಿಯಾ ಅವರು ಗ್ರಾಮ, ಜಿಲ್ಲೆ, ವಿಧಾನಸಭೆ ಮತ್ತು ಸಂಸತ್ ಮಟ್ಟದಲ್ಲಿ ಆಡಳಿತ ವ್ಯವಸ್ಥೆ ಇರಬೇಕೆಂದು ಪ್ರತಿಪಾದಿಸಿದ್ದರು. ಚುನಾವಣೆಯಲ್ಲಿ ಹಣದ ಬಳಕೆಯನ್ನು ಕಟುವಾಗಿ ವಿರೋಧಿಸುವ ಮೂಲಕ ಭಾರತೀಯ ರಾಜಕಾರಣಕ್ಕೆ ಹೊಸ ಆಯಾಮ ನೀಡಿದ ರಾಜಕಾರಣಿಯಾಗಿದ್ದರು. ಅಕ್ಕಮಹಾದೇವಿಯವರ ಚಿಂತನೆಗಳಿಂದ ಪ್ರೇರಿತರಾಗಿ ಪುರುಷ ಪ್ರಧಾನ ವ್ಯವಸ್ಥೆಯನ್ನು ವಿರೋಧಿಸಿದ್ದರು. ಕಲಬುರಗಿಯ ಸಮಾಜವಾದಿ ಚಿಂತಕರಾಗಿದ್ದ ವೀರಣ್ಣ ತಿಮ್ಮಾಜಿ ಅವರ ಮೂಲಕ ಅಕ್ಕಮಹಾದೇವಿ ಮತ್ತು ಬಸವಣ್ಣನವರ ತತ್ವಗಳನ್ನು ತಿಳಿದುಕೊಂಡಿದ್ದರು ಎಂದು ವಿವರಿಸಿದರು.

ಸಮೃದ್ಧ ಭಾರತ ನಿರ್ಮಾಣಕ್ಕೆ ಸಮತೆಯ ಸಮಾಜದ ಚಿಂತನೆಗಳು ಇಂದು ಅತ್ಯಂತ ಅಗತ್ಯವಾಗಿವೆ. ಈ ಕಾರಣದಿಂದ ಕರ್ನಾಟಕದಲ್ಲಿ ಅನೇಕ ಸಮಾಜವಾದಿ ಚಿಂತಕರು ರೂಪುಗೊಂಡಿದ್ದಾರೆ. ಈ ಕೃತಿ ಲೋಹಿಯಾ ಅವರ ವಿಚಾರಧಾರೆಗಳನ್ನು ಜನರಿಗೆ ತಲುಪಿಸಲು ಪ್ರೇರಣೆ ನೀಡಲಿದೆ ಎಂದು ಬಿ.ಆರ್. ಪಾಟೀಲ್ ಅಭಿಪ್ರಾಯಪಟ್ಟರು.

ಸಾಹಿತಿ ಹಾಗೂ ಅನುವಾದಕಿ ಡಾ. ಹೇಮಾ ಪಟ್ಟಣಶೆಟ್ಟಿ ಮಾತನಾಡಿ, ಲೋಹಿಯಾ ಅವರು ಮಾನವತಾವಾದಿ ವ್ಯಕ್ತಿತ್ವದವರಾಗಿದ್ದರು. ಭಾರತದ ಬಡತನ ಮತ್ತು ಹಸಿವಿನ ಸಮಸ್ಯೆಗಳನ್ನು ಅರಿಯಲು ಹೊರಟ ದೂರದೃಷ್ಟಿಯ ಚಿಂತಕರಾಗಿದ್ದರು ಎಂದು ಹೇಳಿದರು.

ಮಾನವೀಯತೆ ಮತ್ತು ತಾರ್ಕಿಕ ಚಿಂತನೆಯನ್ನು ಮೈಗೂಡಿಸಿಕೊಂಡಿದ್ದ ಲೋಹಿಯಾ ಅವರು ಸಮಾಜವಾದದ ಮೂಲಕ ಪ್ರಜಾಪ್ರಭುತ್ವದಲ್ಲಿ ಗಂಡು-ಹೆಣ್ಣಿನ ಸಮಾನತೆಯನ್ನು ತೀವ್ರವಾಗಿ ಪ್ರತಿಪಾದಿಸಿದ್ದರು. ಲೋಹಿಯಾ ಅವರ ಸಮಗ್ರ ವ್ಯಕ್ತಿತ್ವವನ್ನು ಲೇಖಕ ನಟರಾಜ್ ಹುಳಿಯಾರ್ ಅವರು ಮೂರು ದಶಕಗಳ ಅಧ್ಯಯನ ಮತ್ತು ಚಿಂತನೆಯ ಫಲವಾಗಿ ಸತ್ಯನಿಷ್ಠೆಯಿಂದ ಕಟ್ಟಿಕೊಟ್ಟು ಓದುಗರಿಗೆ ನೀಡಿದ್ದಾರೆ. ಲೋಹಿಯಾ ಅವರ ಸಮಾನತಾವಾದಿ ಚಿಂತನೆಗಳಿಂದ ಆಕರ್ಷಿತರಾದ ನೂರಾರು ಲೇಖಕರು ತಮ್ಮ ಬರಹಗಳ ಮೂಲಕ ಆ ವಿಚಾರಧಾರೆಗೆ ಕೊಡುಗೆ ನೀಡಿದ್ದಾರೆ ಎಂದು ತಿಳಿಸಿದರು. ಕೇಂದ್ರೀಯ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಡಾ. ವಿಕ್ರಮ್ ವಿಸಾಜಿ ಮಾತನಾಡಿ, ಲೋಹಿಯಾ ಮತ್ತು ಅಂಬೇಡ್ಕರ್ ಅವರ ರಾಜಕೀಯ ಚಿಂತನೆಗಳು ಮುಖಾಮುಖಿಯಾದ ಕಾಲಘಟ್ಟವನ್ನು ನಟರಾಜ್ ಹುಳಿಯಾರ್ ತಮ್ಮ ಒಳನೋಟದ ಮೂಲಕ ಕೃತಿಯಲ್ಲಿ ಕಟ್ಟಿಕೊಟ್ಟಿದ್ದಾರೆ ಎಂದು ಹೇಳಿದರು.

ಈ ಕೃತಿಯಲ್ಲಿ ಲೋಹಿಯಾ ಅವರ ವೈಯಕ್ತಿಕ ಜೀವನ, ವಿಚಾರಧಾರೆ, ರಾಜಕೀಯ ಸಾಧ್ಯತೆಗಳು ಹಾಗೂ ಭಾರತೀಯ ಸಂಸ್ಕೃತಿಯನ್ನು ಅವರು ಗ್ರಹಿಸಿದ ರೀತಿಯನ್ನು ಜೀವನಯಾನದ ಮೂಲಕ ಪರಿಚಯಿಸಲಾಗಿದೆ. ಚರಿತ್ರೆಯನ್ನು ಓದುವ ಮತ್ತು ಅರ್ಥೈಸಿಕೊಳ್ಳುವ ಬಗೆಯ ಕುರಿತು ಎಚ್ಚರ ಮೂಡಿಸುವ ಲೋಹಿಯಾ ಅವರ ಚಿಂತನೆಗಳನ್ನು ಕೃತಿ ಒಳಗೊಂಡಿದೆ. ನಿರಾಕರಣೆ ಮತ್ತು ಸ್ವೀಕಾರದ ನೆಲೆಗಳನ್ನು ತಿಳಿಸಿಕೊಡುವ ಮಹತ್ವದ ಕೃತಿ ಇದಾಗಿದೆ ಎಂದು ಅಭಿಪ್ರಾಯಪಟ್ಟರು. ಕೃತಿಯ ಲೇಖಕ ನಟರಾಜ್ ಹುಳಿಯಾರ್ ಮಾತನಾಡಿ, ಇಂತಹ ಕೃತಿ ರಚನೆಗೆ ಚಿಂತಕರ ಬರಹಗಳು ಹಾಗೂ ಅನೇಕ ಲೇಖನಗಳು ಪ್ರೇರಣೆಯಾಗಿವೆ. ಯಾವುದೇ ಲೇಖಕ ಕೃತಿ ರಚಿಸುವ ಮೊದಲು ಆತ್ಮಕಥನದ ಮೂಲಕ ಸತ್ಯವನ್ನು ದಾಖಲಿಸುವ ಪ್ರಯತ್ನ ಮಾಡಬೇಕು. ಆಗ ಮಾತ್ರ ಆತ ನಿಜವಾದ ಲೇಖಕನಾಗಿ ಬೆಳೆಯಲು ಸಾಧ್ಯ ಎಂದು ಹೇಳಿದರು.

ಕೃತಿಯ ಮೊದಲ ಮುದ್ರಣದ ಒಂದು ಸಾವಿರ ಪ್ರತಿಗಳೂ ಸಂಪೂರ್ಣವಾಗಿ ಮಾರಾಟವಾಗಿದ್ದು, ಎರಡನೇ ಮುದ್ರಣಕ್ಕೆ ಬೇಡಿಕೆ ಬಂದಿರುವುದು ಓದುಗರಲ್ಲಿ ಲೋಹಿಯಾ ಅವರ ಚಿಂತನೆಗಳ ಮೇಲಿರುವ ಪ್ರೀತಿಗೆ ಸಾಕ್ಷಿಯಾಗಿದೆ ಎಂದು ಸಂತಸ ವ್ಯಕ್ತಪಡಿಸಿದರು. ಕಾರ್ಯಕ್ರಮದಲ್ಲಿ ಕುಮಾರಿ ಪೂಜಾ ಪ್ರಾರ್ಥನಾ ಗೀತೆ ಹಾಡಿದರು. ಪಲ್ಲವ ಪ್ರಕಾಶನದ ವೆಂಕಟೇಶ್ ಅವರು ಎಲ್ಲರನ್ನು ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಕೇಂದ್ರೀಯ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಅಜೀಮ್ ಪಾಷಾ ವಂದನಾರ್ಪಣೆ ಮಾಡಿ ದರು. ಕಿರಣ್ ವಲ್ಯಾಪುರೆ ಕಾರ್ಯಕ್ರಮ ನಿರೂಪಿಸಿದರು.

ಮಕ್ಕಳಿಗೆ ಉತ್ತಮ ಶಿಕ್ಷಣ ನೀಡುವುದು ಪಾಲಕರ ಪ್ರಮುಖ ಜವಾಬ್ದಾರಿ: ರಾಜಕುಮಾರ್ ಬಿ.ಶಿಂಧೆ



ಬೀದರ್

ಮಕ್ಕಳಿಗೆ ಉತ್ತಮ ಶಿಕ್ಷಣ ನೀಡುವುದು ಪಾಲಕರ ಪ್ರಮುಖ ಜವಾಬ್ದಾರಿಯಾಗಿದೆ. ಶಿಕ್ಷಣವು ಕೇವಲ ಉದ್ಯೋಗ ಪಡೆಯುವ ಸಾಧನವಲ್ಲ; ಅದು ವ್ಯಕ್ತಿಯ ಜ್ಞಾನ, ಸ್ವಾಭಿಮಾನ, ವೈಚಾರಿಕತೆ ಹಾಗೂ ಸಾಮಾಜಿಕ ಪ್ರಗತಿಗೆ ದಾರಿದೀಪವಾಗಿದೆ ಎಂದು ಜ್ಞಾನ ಸೂರ್ಯ ತರಬೇತಿ ಸಂಸ್ಥೆಯ ಸಂಸ್ಥಾಪಕ ರಾಜಕುಮಾರ್ ಬಿ. ಶಿಂಧೆ ತಿಳಿಸಿದರು. ಬಸವಕಲ್ಯಾಣ ತಾಲ್ಲೂಕಿನ ರಾಜೋಳಾ ಗ್ರಾಮದಲ್ಲಿ ಜ್ಞಾನ ಸೂರ್ಯ ತರಬೇತಿ ಸಂಸ್ಥೆಯ ವತಿಯಿಂದ ಮಂಗಳವಾರ ಆಯೋಜಿಸಿದ್ದ 70ನೇ ಐತಿಹಾಸಿಕ ಧಮ್ಮ ಚಕ್ರ ಪ್ರವರ್ತನ ಹಾಗೂ ಅಶೋಕ ವಿಜಯದಶಮಿ ದಿನಾಚರಣೆಯಲ್ಲಿ ಅವರು ಮಾತನಾಡಿದರು.

ಪ್ರತಿಯೊಬ್ಬ ಪಾಲಕರು ತಮ್ಮ ಮಕ್ಕಳ ವಿದ್ಯಾಭ್ಯಾಸದ ಬಗ್ಗೆ ಕಾಳಜಿ ವಹಿಸಿ, ಅವರಿಗೆ ಉತ್ತಮ ಕಲಿಕಾ ವಾತಾವರಣ ಕಲ್ಪಿಸಬೇಕು. ವಿಶೇಷವಾಗಿ ಬಡ ಮತ್ತು ಹಿಂದುಳಿದ ಸಮುದಾಯಗಳ ಮಕ್ಕಳು ಶಿಕ್ಷಣದಿಂದ ವಂಚಿತರಾಗದಂತೆ ನೋಡಿಕೊಳ್ಳಬೇಕು. ಡಾ. ಬಿ.ಆರ್. ಅಂಬೇಡ್ಕರ್ ಅವರ ಶಿಕ್ಷಣವೇ ಪ್ರಗತಿಯ ಪ್ರಮುಖ ಸಾಧನ ಎಂಬ ಆಶಯವನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಶಿಕ್ಷಣದ ಮೂಲಕ ಸಮಾಜದಲ್ಲಿ ಸಮಾನತೆ ಮತ್ತು ಪರಿವರ್ತನೆ ತರಲು ಎಲ್ಲರೂ ಶ್ರಮಿಸಬೇಕು ಎಂದು ಅವರು ಕರೆ ನೀಡಿದರು.

ಡಾ. ಬಿ.ಆರ್. ಅಂಬೇಡ್ಕರ್ ಅವರು ಬೌದ್ಧ ಧಮ್ಮ ಸ್ವೀಕರಿಸಿದ ಐತಿಹಾಸಿಕ ಘಟನೆಯು ಭಾರತೀಯ ಸಮಾಜದಲ್ಲಿ ಸಮಾನತೆ, ಸ್ವಾಭಿಮಾನ ಮತ್ತು ಸಾಮಾಜಿಕ ನ್ಯಾಯದ ದೃಷ್ಟಿಯಿಂದ ಮಹತ್ವದ ತಿರುವಾಗಿದೆ. ಅಶೋಕ ವಿಜಯ ದಶಮಿಯು ಧಮ್ಮ, ಶಾಂತಿ ಹಾಗೂ ಮಾನವೀಯ ಮೌಲ್ಯಗಳ ಮಹತ್ವವನ್ನು ಸಾರುವ ದಿನವಾಗಿದೆ ಎಂಬ ಸಂದೇಶವನ್ನು ಈ ಸಂದರ್ಭದಲ್ಲಿ ಹಂಚಿಕೊಳ್ಳಲಾಯಿತು.

ಕಾರ್ಯಕ್ರಮದಲ್ಲಿ ಭೀಮ್ ಆರ್ಮಿ ಭಾರತ್ ಏಕತಾ ಮಿಷನ್‌ನ ರಾಜೋಳಾ ಘಟಕದ ಅಧ್ಯಕ್ಷ ವೆಂಕಟ್ ಎಂ. ಕನಕಟ್ಟೆ, ರಾಜೋಳಾ ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷ ರವೀಂದ್ರ ಜಿ. ಮಾಲೆ, ಪುಂಡಲಿಕ್ ಶೋಬೆರ್ಕ,್ ಗೋಪಾಲ್ ಆರ್. ಮಾಲೆ, ಪುಟ್ಟರಾಜ್ ಘೋಗ್ಗೆ, ಬಾಬು ಪ್ರಸಾದ್, ಅಂಬಣ್ಣ ಘೋಗ್ಗೆ ಸೇರಿದಂತೆ ಗ್ರಾಮದ ಮುಖಂಡರು ಹಾಗೂ ಇತರರು ಭಾಗವಹಿಸಿದ್ದರು. ಡಿವೈಎಫ್ಐ ಸಂಘಟನೆಯ ಸಂಚಾಲಕ ಶಿವಪುತ್ರ ಎಸ್. ಚಲ್ವಾಪೂರೆ ಬುದ್ಧ ವಂದನೆ ನಡೆಸಿಕೊಟ್ಟರು.



ಶರಣರ ತ್ಯಾಗದಿಂದ ವಚನ ಸಾಹಿತ್ಯದ ಉಳಿವು : ಡಾ. ಬಸವಲಿಂಗ ಪಟ್ಟದೇವರು

ಭಾಲ್ಕಿ

ವಚನ ಸಾಹಿತ್ಯದ ರಕ್ಷಣೆಗಾಗಿ ಶರಣರು ತಮ್ಮ ಪ್ರಾಣವನ್ನೇ ತ್ಯಾಗ ಮಾಡಿದ್ದಾರೆ. ಅವರ ಹೋರಾಟ ಮತ್ತು ತ್ಯಾಗದ ಫಲವಾಗಿ ಇಂದು ವಚನ ಸಾಹಿತ್ಯ ಉಳಿದುಕೊಂಡಿದೆ. ಹೀಗಾಗಿ ವಚನಗಳ ಅಧ್ಯಯನದ ಜತೆಗೆ ಅವುಗಳ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ವಚನ ಪ್ರಜ್ಞೆ ಬೆಳೆಸಿಕೊಳ್ಳಬೇಕು ಎಂದು ಡಾ. ಬಸವಲಿಂಗ ಪಟ್ಟದೇವರು ಹೇಳಿದರು.

ನಗರದ ಹಿರೇಮಠ ಸಂಸ್ಥಾನದಲ್ಲಿ ಬುಧವಾರ ನಡೆದ ಮರಣವೇ ಮಹಾನವಮಿ ಹಾಗೂ ಕಲ್ಯಾಣ ಕ್ರಾಂತಿ ವಿಜಯೋತ್ಸವದ ಅಂಗವಾಗಿ ಆಯೋಜಿಸಿದ್ದ ವಚನ ಸಾಹಿತ್ಯ ಪಲ್ಲಕ್ಕಿ ಪೂಜೆಯ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದ ಅವರು, ಕಲ್ಯಾಣದಿಂದ ಉಳವಿವರೆಗೆ ಶರಣರು ವಚನ ಸಾಹಿತ್ಯವನ್ನು ಸಂರಕ್ಷಿಸಲು ನಡೆಸಿದ ಹೋರಾಟ ಸ್ಮರಣೀಯವಾಗಿದೆ ಎಂದರು. ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್‌ರಾಜ್ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ್ ಖಂಡ್ರೆ ಅವರು ಪಲ್ಲಕ್ಕಿ ಪೂಜೆ ನೆರವೇರಿಸಿ ವಚನ ಪಠಣ ಮಾಡಿದರು.


ಈ ಸಂದರ್ಭದಲ್ಲಿ ಗುರುಬಸವ ಪಟ್ಟದೇವರು, ಮಹಾಲಿಂಗ ಮಹಾಸ್ವಾಮಿ, ಶಿವಬಸವ ಸ್ವಾಮಿ ಹಾಗೂ ಸಿದ್ಧಬಸವ ಸ್ವಾಮಿ, ಮಾಜಿ ಶಾಸಕ ಪ್ರಕಾಶ್ ಖಂಡ್ರೆ, ಸುಭಾಷ್ ಕಾರಾಮುಂಗೆ, ಕಿರಣ್ ಖಂಡ್ರೆ, ಬಸವರಾಜ್ ಮರೆ, ರಾಜಕುಮಾರ್ ಹೊಸದೊಡ್ಡೆ, ಸಂತೋಷ್ ಬಿ.ಜಿ. ಪಾಟೀಲ್, ಮಲ್ಲಮ್ಮ ಆರ್. ಪಾಟೀಲ್ ಹಾಗೂ ಸುನೀಲ್ ಹೊನ್ನಾಳೆ ಸೇರಿದಂತೆ ಹಲವರು ಭಾಗವಹಿಸಿದ್ದರು. ರಾಜು ಜುಬರೆ ಪ್ರಾಸ್ತಾವಿಕವಾಗಿ ಮಾತನಾಡಿದರು. ದೀಪಕ್ ಠಮಕೆ ನಿರೂಪಿಸಿದರು.

ಸಂಗೀತ ದಿಗ್ಗಜ ಪಂ. ಡಾ. ಎಂ. ವೆಂಕಟೇಶಕುಮಾರ ಅವರಿಗೆ ಶ್ರೀ ಚನ್ನ ರೇಣುಕ ಬಸವ ರಾಷ್ಟ್ರೀಯ ಪ್ರಶಸ್ತಿ ಪ್ರದಾನ

ಬಸವಕಲ್ಯಾಣ,

ತಾಲೂಕಿನ ಸುಕ್ಷೇತ್ರ, ಹಾರಕೂಡದ ಶ್ರೀ ಚನ್ನಬಸವೇಶ್ವರ ಸಂಸ್ಥಾನ ಹಿರೇಮಠದಲ್ಲಿ ಲಿಂಗೈಕ್ಯ ಶ್ರೀ ಗುರುಲಿಂಗ ಶಿವಾಚಾರ್ಯರ 57ನೇ ಪುಣ್ಯಸ್ಮರಣೋತ್ಸವ, 40ನೇ ಅನುಭಾವ ಪ್ರಚಾರ ಉಪನ್ಯಾಸ ಮಾಲೆ ಹಾಗೂ ಶ್ರೀ ಚನ್ನ ರೇಣುಕ ಬಸವ ರಾಷ್ಟ್ರೀಯ ಪ್ರಶಸ್ತಿ ಪ್ರದಾನ ಸಮಾರಂಭ ಸೋಮವಾರ (ಅ.19) ಶ್ರದ್ಧಾಭಕ್ತಿಯಿಂದ ಜರುಗಿತು.

ಶ್ರೀಮಠದ ಚನ್ನರೇಣುಕ ಬಸವ ಮಂಟಪದಲ್ಲಿ ಶಿವಾಚಾರ್ಯರತ್ನ, ಧರ್ಮರತ್ನ, ಸದ್ಧರ್ಮ ಶಿಖಾಮಣಿ, ಕರ್ನಾಟಕ ಸಾಂಸ್ಕೃತಿಕ ರತ್ನ ಪುರಸ್ಕೃತ ಪೀಠಾಧಿಪತಿ ಡಾ. ಚನ್ನವೀರ ಶಿವಾಚಾರ್ಯರ ಪಾವನ ಸಾನಿಧ್ಯದಲ್ಲಿ ನಡೆದ ಸಮಾರಂಭವನ್ನು ಕಲಬುರಗಿಯ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ಪ್ರಾಧ್ಯಾಪಕ



ಡಾ. ವಿಕ್ರಮ ವಿಸಾಜಿ ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿದರು. ಬಸವಕಲ್ಯಾಣ ಶಾಸಕ ಶರಣು ಸಲಗರ ಅಧ್ಯಕ್ಷತೆ ವಹಿಸಿದ್ದರು.

ಪ್ರಶಸ್ತಿ ಸ್ವೀಕರಿಸಿದ ಪಂ. ಡಾ. ಎಂ. ವೆಂಕಟೇಶಕುಮಾರ ಅವರು ತಮ್ಮ ಸುಮಧುರ ಕಂಠದಿಂದ ಹಾರಕೂಡ ಶ್ರೀಮಠದ ಪೀಠಾಧಿಪತಿ ಡಾ. ಚನ್ನವೀರ ಶಿವಾಚಾರ್ಯರು ರಚಿಸಿದ ಗೀತೆಗಳನ್ನು ಹಾಡುವ ಮೂಲಕ ಸಭಿಕರನ್ನು ಭಕ್ತಿಭಾವದಲ್ಲಿ ತಲ್ಲೀನಗೊಳಿಸಿದರು.

ಎರಡು ಗ್ರಂಥಗಳ ಬಿಡುಗಡೆ: ಶ್ರೀ ಮಲ್ಲಿನಾಥ ಹಿರೇಮಠ ಹಾರಕೂಡ ಸಂಪಾದಿಸಿದ, ಸದ್ಗುರು ಶ್ರೀ ಹಾರಕೂಡ ಚನ್ನಬಸವ ಶಿವಯೋಗಿಗಳ ಕುರಿತ ಭಕ್ತಿಗೀತೆಗಳ ಸಂಕಲನ ಶ್ರೀ ಹಾರಕೂಡ ಚನ್ನಬಸ ಹಾಗೂ ಹಿರಿಯ ಪ್ರಾಧ್ಯಾಪಕ ಪ್ರೆ. ನಿಜಲಿಂಗಪ್ಪ ಮಟ್ಟಿಹಾಳ ರಚಿಸಿದ ಬೇಂದ್ರೆ ಕಾವ್ಯ: ಮರ್ತ್ಯದಲ್ಲಿ ಅರಳಿದ ದೇವಲೋಕ ಗ್ರಂಥಗಳನ್ನು ಆಳಂದ ಸಹಕಾರಿ ಸಕ್ಕರೆ ಕಾರ್ಖಾನೆಯ ಉಪಾಧ್ಯಕ್ಷ ಸುಭಾಷ ಮುರುಡ ಬೆಳಮಗಿ ಬಿಡುಗಡೆಗೊಳಿಸಿದರು.

40ನೇ ಅನುಭಾವ ಪ್ರಚಾರ ಉಪನ್ಯಾಸ ಮಾಲೆಯ ಅಂಗವಾಗಿ ಧಾರವಾಡದ ಹಿರಿಯ ಪ್ರಾಧ್ಯಾಪಕ ಪ್ರೆ. ನಿಜಲಿಂಗಪ್ಪ ಮಟ್ಟಿಹಾಳ ಅವರು ಬೇಂದ್ರೆ ಕಾವ್ಯ: ಮರ್ತ್ಯದಲ್ಲಿ ಅರಳಿದ ದೇವಲೋಕ ವಿಷಯ ಕುರಿತು ವಿಶೇಷ ಉಪನ್ಯಾಸ ನೀಡಿದರು.

ಸಮಾರಂಭದಲ್ಲಿ ಧಾರವಾಡದ ಹಿರಿಯ ಉಪನ್ಯಾಸಕ ಡಾ. ಸಂಗಮೇಶ ಸವದತ್ತಿಮಠ, ಬಸವಕಲ್ಯಾಣ ಸಹಾಯಕ ಆಯುಕ್ತ ಪ್ರಕಾಶ ಕುದರೆ, ಹುಮನಾಬಾದ್ ಡಿವೈಎಸ್‌ಪಿ ಮಡೋಳಪ್ಪ ಪಿ.ಎಸ್., ಕೃಷ್ಣಾ ಮೇಲ್ದಂಡೆ ಯೋಜನೆ ಕಾಡಾ ಪ್ರಾಧಿಕಾರದ ಅಧ್ಯಕ್ಷ ಬಾಬು ಹೊನ್ನಾನಾಯಕ, ಬಸವಕಲ್ಯಾಣ ಶ್ರೀ ಬಸವೇಶ್ವರ ದೇವಸ್ಥಾನ ವಿಶ್ವಸ್ಥ ಸಮಿತಿ ಅಧ್ಯಕ್ಷ ಶಶಿಕಾಂತ ದುರ್ಗೆ, ನಿವೃತ್ತ ನ್ಯಾಯಾಧೀಶ ಎಸ್.ಎಸ್. ನಾಗರಾಳೆ, ನಿವೃತ್ತ ಕಾರ್ಯಪಾಲಕ ಎಂಜಿನಿಯರ್ ದೇವಿದಾಸ ಚವ್ಹಾಣ ಸೇರಿದಂತೆ ಗಣ್ಯರು ಭಾಗವಹಿಸಿದ್ದರು. ಕಲಬುರಗಿಯ ಸಾಹಿತಿ ಡಾ. ಗವಿಸಿದ್ದಪ್ಪ ಎಚ್. ಪಾಟೀಲ ಪ್ರಾಸ್ತಾವಿಕವಾಗಿ ಮಾತನಾಡಿದರು. ಬಾಗಲಕೋಟೆಯ ವಿಶ್ರಾಂತ ಪ್ರಾಚಾರ್ಯ ಡಾ. ಸಿದ್ರಾಮಯ್ಯ ಸ್ವಾಮಿ ಗೋರಟಾ, ಹುಮನಾಬಾದ್‌ನ ಜನಾರ್ಧನ ವಾಘಮಾರೆ ಹಾಗೂ ಮನ್ನಾಖೇಳಿಯ ಆಕಾಶವಾಣಿ ಕಲಾವಿದ ನವಲಿಂಗ ಪಾಟೀಲ ಪ್ರಾರ್ಥನಾ ಗೀತೆ ನಡೆಸಿಕೊಟ್ಟರು.

ಲಾತೂರಿನ ಸರಜವಳಗಾದ ಜಗನ್ನಾಥ ಸಿದ್ರಾಮಪ್ಪ ಕುಂಬಾರ ಅವರು ಗುರುಲಿಂಗ ಶಿವಾಚಾರ್ಯರ 57ನೇ ಪುಣ್ಯಸ್ಮರಣೋತ್ಸವದ ಅಂಗವಾಗಿ ದಾಸೋಹ ಸೇವೆ ಸಲ್ಲಿಸಿದರು. ಶ್ರೀಮಠದ ಭಕ್ತರು ಹಾಗೂ ವಿವಿಧ ಭಾಗಗಳಿಂದ ಆಗಮಿಸಿದ ಗಣ್ಯರು ಸಮಾರಂಭದಲ್ಲಿ ಪಾಲ್ಗೊಂಡಿದ್ದರು.


ನಿಮ್ಮೂರು ಸುದ್ದಿ

ಸಂಪಾದಕೀಯ

ಮಾನವೀಯತೆಯ ಬಲಿಗೊಟ್ಟು, ಜೀವಿಸುವ ಹಕ್ಕು ಕಸಿಯುವ ಶಿಕ್ಷೆ ಸಮರ್ಥನೀಯವಲ್ಲ!

ಸೌದಿ ಅರೇಬಿಯಾದ ಮರಣದಂಡನೆ ಪ್ರಕರಣದಿಂದ ಚಿಂತನೆಗೆ ಹಚ್ಚುವ ಸಂಗತಿ ಎಂದರೆ, ಧಾರ್ಮಿಕ ಪಾವಿತ್ರ್ಯತೆಯ ಜತೆಗೆ ಮಾನವ ಜೀವದ ಪಾವಿತ್ರ್ಯವೂ ದೊಡ್ಡದು. ಯಾವುದೇ ಧರ್ಮದ ನಾಗರಿಕತೆಯ ಶ್ರೇಷ್ಠತೆಯನ್ನು ನಿರ್ಧರಿಸುವುದು ಅದು ಎಷ್ಟು ಕಠಿಣವಾಗಿ ಶಿಕ್ಷಿಸುತ್ತದೆ ಎಂಬುದರಿಂದಲ್ಲ, ಅದು ಎಷ್ಟು ನ್ಯಾಯಯುತವಾಗಿ ನಡೆದುಕೊಳ್ಳುತ್ತದೆ, ಎಷ್ಟು ಜೀವಗಳನ್ನು ರಕ್ಷಿಸುತ್ತದೆ, ಎಷ್ಟು ಮಾನವೀಯತೆಯನ್ನು ಉಳಿಸಿಕೊಳ್ಳುತ್ತದೆ ಎಂಬುದರಿಂದ. ಮಾನವ ಧರ್ಮವೆಂದರೆ ಇದೇ.

ಯಾವುದೇ ನಾಗರಿಕ ಸಮಾಜದಲ್ಲಿ ಧಾರ್ಮಿಕ ಶ್ರದ್ಧಾಕೇಂದ್ರಗಳು, ಪವಿತ್ರ ಸ್ಥಳಗಳು ಮತ್ತು ಆಯಾ ಸಮುದಾಯಗಳ ಭಾವನೆಗಳನ್ನು ಗೌರವಿಸುವುದು ಪ್ರತಿಯೊಬ್ಬರ ನೈತಿಕ ಹೊಣೆಗಾರಿಕೆ. ಮಸೀದಿ, ದೇವಾಲಯ ಅಥವಾ ಚರ್ಚ್‌ಗಳ ಪಾವಿತ್ರ್ಯವನ್ನು ಕಾಪಾಡುವುದು ಸಾರ್ವಜನಿಕ ನೈತಿಕತೆಯ ಭಾಗ ಎಂಬುದರಲ್ಲಿ ಎರಡನೇ ಮಾತಿಲ್ಲ. ಆದರೆ, ಪಾವಿತ್ರ್ಯಕ್ಕೆ ಧಕ್ಕೆ ತಂದಿದ್ದಾರೆ ಅಥವಾ ನಿಯಮ ಉಲ್ಲಂಘಿಸಿದ್ದಾರೆ ಎಂಬ ಕಾರಣ ನೀಡಿ ವ್ಯಕ್ತಿಯೊಬ್ಬನ ಜೀವಿಸುವ ಮೂಲಭೂತ ಹಕ್ಕನ್ನೇ ಕಸಿದುಕೊಳ್ಳುವುದು ಎಷ್ಟರಮಟ್ಟಿಗೆ ಸಮರ್ಥನೀಯ ಎಂಬುದನ್ನು ಮಾನವ ಹಕ್ಕುಗಳು ಹಾಗೂ ಮಾನವೀಯ ನೆಲೆಗಟ್ಟಿನಲ್ಲಿ ಗಂಭೀರವಾಗಿ ಚಿಂತಿಸಬೇಕಿರುವ ಕ್ಷಣ ಇದು.



ಸೌದಿ ಅರೇಬಿಯಾದಲ್ಲಿ ಇತ್ತೀಚೆಗೆ ಬಾಂಗ್ಲಾದೇಶ ಮೂಲದ ಇಬ್ಬರು ವಲಸೆ ಕಾರ್ಮಿಕರಿಗೆ ಮರಣದಂಡನೆ ವಿಧಿಸಲಾಗಿದೆ. ಜಗತ್ತಿನಾದ್ಯಂತ ಸೌದಿಯ ನಡೆಗೆ ತೀವ್ರ ಟೀಕೆ ವ್ಯಕ್ತವಾಗುತ್ತಿದೆ. ಈ ಪ್ರಕರಣದ ಸುತ್ತ ಮಾಧ್ಯಮಗಳಲ್ಲಿ ವಿಭಿನ್ನ ರೀತಿಯ ವರದಿಗಳೂ ಹರಿದಾಡುತ್ತಿವೆ. ಒಂದು ವರ್ಗ ಇದನ್ನು ಅನೈತಿಕ ಕೃತ್ಯಕ್ಕೆ ಸಿಕ್ಕ ಶಿಕ್ಷೆ ಎಂದರೆ, ಮತ್ತೊಂದು ವರ್ಗ ಕಳೆದ ಎರಡು-ಮೂರು ವರ್ಷಗಳಿಂದ ನ್ಯಾಯಾಲಯದಲ್ಲಿ ವಿಚಾರಣೆ ನಡೆದು, ಅಪರಾಧ ಸಾಬೀತಾದ ಮೇಲೆಯೇ ಅಲ್ಲಿನ ಕಾನೂನಿನಂತೆ ಶಿಕ್ಷೆ ಜಾರಿಯಾಗಿದೆ ಎನ್ನುತ್ತಿದೆ. ಸೌದಿ ಸರ್ಕಾರದಿಂದ ಈ ಕುರಿತು ಇನ್ನು ಅಧಿಕೃತ ಸ್ಪಷ್ಟನೆ ಹೊರಬಿದ್ದಿಲ್ಲವಾದರೂ, ಅದು ಮರಣದಂಡನೆ ವಿಧಿಸಬಹುದಾದ ಅಪರಾಧವಂತೂ ಅಲ್ಲ. ಬಾಂಗ್ಲಾ ಪ್ರಜೆಗಳು ಎಸಗಿದ ಕೃತ್ಯ ಏನೇ ಇರಲಿ, ಮರಣದಂಡನೆಯಂತಹ ಕಠೋರ ಶಿಕ್ಷೆ ಸಮರ್ಥನೀಯವಲ್ಲ.

ಅಂತಾರಾಷ್ಟ್ರೀಯ ಕಾನೂನಿನಲ್ಲಿ ಸಾರ್ವಭೌಮತ್ವದ ಸಿದ್ಧಾಂತದ ಪ್ರಕಾರ, ದೇಶವೊಂದು ತನ್ನ ಭೌಗೋಳಿಕ ಎಲ್ಲೆಯೊಳಗೆ ನಡೆಯುವ ಅಪರಾಧಗಳಿಗೆ ಸಂಬಂಧಿಸಿದಂತೆ ವಿದೇಶಿ ಪ್ರಜೆಗಳನ್ನು ಒಳಗೊಂಡಂತೆ ಎಲ್ಲರ ಮೇಲೆಯೂ ತನ್ನ ಕಾನೂನುಗಳನ್ನೇ ಅನ್ವಯಿಸುವ ಮತ್ತು ಶಿಕ್ಷೆ ವಿಧಿಸುವ ಸಂಪೂರ್ಣ ಅಧಿಕಾರವನ್ನು ಹೊಂದಿರುತ್ತದೆ. ಜತೆಗೆ ಈ ಅಧಿಕಾರವು ಮಾನವ ಹಕ್ಕುಗಳ ಒಪ್ಪಂದಗಳ ಕಟ್ಟುನಿಟ್ಟಿನ ನಿಯಮಗಳಿಗೆ ಒಳಪಟ್ಟಿರುತ್ತದೆ. ವಿಯೆನ್ನಾ ಕಾನ್ಸುಲರ್ ಒಪ್ಪಂದ- 36ದ ಪ್ರಕಾರ, ಯಾವುದೇ ದೇಶವು ವಿದೇಶಿ ಪ್ರಜೆಯನ್ನು ಬಂಧಿಸಿದಾಗ ಅಥವಾ ಅವರಿಗೆ ಗಂಭೀರ ಶಿಕ್ಷೆ ವಿಧಿಸುವ ಮುನ್ನ ಆತನ ದೇಶದ ರಾಯಭಾರ ಕಚೇರಿಗೆ ತಕ್ಷಣ ಮಾಹಿತಿ ನೀಡಬೇಕು ಮತ್ತು ಆರೋಪಿಗೆ ಅಗತ್ಯ ಕಾನೂನು ನೆರವು ಹಾಗೂ ಭಾಷಾ ನೆರವು ಸಿಗುವಂತೆ ನೋಡಿಕೊಳ್ಳುವುದು ಕಡ್ಡಾಯ. ಜೊತೆಗೆ, ವಿಶ್ವಸಂಸ್ಥೆಯ ಸಿವಿಲ್ ಮತ್ತು ರಾಜಕೀಯ ಹಕ್ಕುಗಳ ಅಂತಾರಾಷ್ಟ್ರೀಯ ಒಪ್ಪಂದದ ಪ್ರಕಾರ, ಅತ್ಯಂತ ಭೀಕರ ಹಾಗೂ ಯೋಜಿತ ಕೊಲೆಯಂತಹ ಹಿಂಸಾತ್ಮಕ ಅಪರಾಧಗಳಿಗೆ ಮಾತ್ರವೇ ಮರಣದಂಡನೆಯನ್ನು ಸೀಮಿತಗೊಳಿಸಬೇಕು. ಧಾರ್ಮಿಕ ಆಚರಣೆಯ ಉಲ್ಲಂಘನೆ, ನೈತಿಕ ಅಪರಾಧಗಳು ಅಥವಾ ಅಹಿಂಸಾತ್ಮಕ ಕೃತ್ಯಗಳಿಗೆ ವಿದೇಶಿಯರ ಮೇಲೆ ಮರಣದಂಡನೆ ವಿಧಿಸುವುದು ಸಾರ್ವತ್ರಿಕ ಮಾನವ ಹಕ್ಕುಗಳ ಸ್ಪಷ್ಟ ಉಲ್ಲಂಘನೆಯಾಗುತ್ತದೆ. ಅಂತಾರಾಷ್ಟ್ರೀಯ ನ್ಯಾಯಾಲಯಗಳ ತೀರ್ಪುಗಳ ಪ್ರಕಾರ, ವಿದೇಶಿ ಪ್ರಜೆಗಳಿಗೆ ನ್ಯಾಯಯುತ ವಿಚಾರಣೆಯ ಹಕ್ಕು ನಿರಾಕರಿಸಿ ಅಥವಾ ರಾಯಭಾರ ಕಚೇರಿಯ ಸಂಪರ್ಕ ನೀಡದೆ ವಿಧಿಸುವ ಮರಣದಂಡನೆಯು ಅಂತಾರಾಷ್ಟ್ರೀಯ ಕಾನೂನಿನಡಿಯಲ್ಲಿ ಕಾನೂನುಬಾಹಿರ ಕೃತ್ಯವೆಂದೇ ಪರಿಗಣಿಸಲ್ಪಡುತ್ತದೆ. ಸೌದಿಯ ಶರಿಯಾ ಕಾನೂನು ಹೇಳುವುದು ಇದನ್ನೇ.

ಗುಜರಾತಿನ ಗೋಧ್ರಾ ಹತ್ಯಾಕಾಂಡವನ್ನು ಖಂಡಿಸುತ್ತಾ ಖ್ಯಾತ ಸಾಹಿತಿ ಪೂರ್ಣಚಂದ್ರ ತೇಜಸ್ವಿಯವರು, ಕೊಂದು ಉಳಿಸಿಕೊಳ್ಳುವ ಧರ್ಮ ಯಾವುದಾದರೂ ಇದೆಯಾ ಈ ಪ್ರಪಂಚದಲ್ಲಿ? ಎಂದಿದ್ದರು. ಸೌದಿಯ ನಿರ್ಧಾರದ ವಿರುದ್ಧ ಜಾಗತಿಕವಾಗಿ ಆಕ್ರೋಶ ವ್ಯಕ್ತವಾಗುತ್ತಿರುವುದು ಒಳ್ಳೆಯ ಬೆಳವಣಿಗೆ, ನಮ್ಮಲ್ಲಿನ್ನೂ ಕೊಂಚ ಮಾನವೀಯತೆ ಉಳಿದಿದೆ! ಆದರೆ, ವಿದೇಶದ ಧಾರ್ಮಿಕ ಶಿಕ್ಷೆಯ ವಿರುದ್ಧ ಮಾನವೀಯತೆ ಮೆರೆಯುವ ನಾವು, ನಮ್ಮದೇ ದೇಶದ ಒಳಗಿನ ಹುಳುಕುಗಳನ್ನು ಸರಿ ಮಾಡಿಕೊಳ್ಳುವುದೂ ಅಗತ್ಯ. ವಯಸ್ಸಿನ ಮಿತಿ ಇಲ್ಲದೆ, ಧರ್ಮ ಭೇದವಿಲ್ಲದೆ ದೇವಾಲಯ, ಚರ್ಚ್, ಮಸೀದಿಗಳ ಅಂಗಳದಲ್ಲೇ ಅಮಾಯಕ ಹೆಣ್ಣುಮಕ್ಕಳ ಮೇಲೆ ಭೀಕರ ಅತ್ಯಾಚಾರ ಎಸಗಿ ಕೊಲೆಗೈದಾಗ, ಆ ಅತ್ಯಾಚಾರಿಗಳ ಪರವಾಗಿ ಮೆರವಣಿಗೆ ನಡೆಸಿ ಹೋರಾಟ ರೂಪಿಸುವ ವಿಕೃತ ಕ್ರಿಮಿಗಳು ನಮ್ಮ ನಡುವೆಯೂ ಇದ್ದಾರೆ. ಸೌದಿಯ ಶಾಸನಕ್ಕೂ, ಅತ್ಯಾಚಾರಿಗಳನ್ನು ರಕ್ಷಿಸಲು ನಿಲ್ಲುವ ಈ ವಿಕೃತ ಮನಸ್ಥಿತಿಗಳಿಗೂ ಯಾವುದೇ ವ್ಯತ್ಯಾಸವಿಲ್ಲ. ಎರಡೂ ಮಾನವೀಯತೆಯ ಶವದ ಮೇಲೆ ನಿಂತಿರುವ ಬೂಟಾಟಿಕೆಗಳೇ.

ಮತ್ತೊಂದೆಡೆ, ಸೌದಿಯ ತೀರ್ಪನ್ನು ಖಂಡಿಸುತ್ತಾ ಮಾನವ ಹಕ್ಕುಗಳ ಪಾಠ ಹೇಳುವವರಲ್ಲೇ ಹಲವರು, ಇದೇ ನೆಲದಲ್ಲಿ ದಲಿತರು, ಶೋಷಿತರು ದೇವಾಲಯ ಪ್ರವೇಶಿಸಿದಾಗ ಅವರ ಮೇಲೆ ದೈಹಿಕ ಹಲ್ಲೆ ನಡೆಸಿ ಸಮಾಜದಿಂದ ಬಹಿಷ್ಕರಿಸುವ ಅಮಾನವೀಯ ಆಚರಣೆಗಳನ್ನು ಪೋಷಿಸುತ್ತಿದ್ದಾರೆ. ಸ್ವಂತ ನಾಡಿನ ಸಹೋದರನಿಗೆ ಸಮಾನತೆಯ ಹಕ್ಕನ್ನು ನಿರಾಕರಿಸುವವರು, ವಿದೇಶದ ಮಾನವ ಹಕ್ಕುಗಳ ಕುರಿತು ಮಾತನಾಡುವುದು ವಿಪರ್ಯಾಸ. ಮಾನವೀಯತೆಯ ಲವಲೇಶವಾದರೂ ಉಳಿದಿರುವ ಯಾವುದೇ ನಾಗರಿಕ ನೆಲದಲ್ಲಿ ಸೌದಿಯ ಕಠೋರ ತೀರ್ಪು ಖಂಡನೀಯವೇ. ಆದರೆ ಆ ಖಂಡನೆ ನಿಷ್ಪಕ್ಷಪಾತವಾಗಿರಬೇಕಾದರೆ, ನಮ್ಮ ಮನೆಯೊಳಗಿನ ಅಪರಾಧಗಳು ಮತ್ತು ಜಾತಿವಾದಿ ಅನ್ಯಾಯಗಳ ವಿರುದ್ಧವೂ ಅದೇ ಮಟ್ಟದ ನೈತಿಕತೆ ಜಾಗೃತಗೊಳ್ಳಬೇಕು.

ಅಂತೆಯೇ, ಅಫ್ಘಾನಿಸ್ತಾನದಂತಹ ಪ್ರದೇಶಗಳಲ್ಲಿ ಭೂಕಂಪ ಸಂಭವಿಸಿದಾಗ ಅವಶೇಷಗಳಡಿಯಲ್ಲಿ ಸಿಲುಕಿದ ಮಹಿಳೆಯರನ್ನು ಧಾರ್ಮಿಕ ಕಟ್ಟುಪಾಡುಗಳ ಹೆಸರಿನಲ್ಲಿ ರಕ್ಷಿಸಲು ಹಿಂಜರಿಯಲಾಯಿತು ಎಂಬುದು ಆಘಾತಕಾರಿ ಸಂಗತಿ! ಒಂದು ಜೀವ ಅಪಾಯದಲ್ಲಿದ್ದಾಗ ಆ ಜೀವವನ್ನು ರಕ್ಷಿಸುವುದು ಮೊದಲ ಮಾನವೀಯ ಕರ್ತವ್ಯ. ಮನುಷ್ಯ ಜೀವವನ್ನು ಉಳಿಸುವುದಕ್ಕಿಂತ ಬೇರೆ ಯಾವ ಸಂಪ್ರದಾಯವನ್ನೂ ಯಾವ ಧರ್ಮವೂ ಬೋಧಿಸುವುದಿಲ್ಲ. ಅಂತಾರಾಷ್ಟ್ರೀಯ ಕಾನೂನು ಮತ್ತು ಮಾನವ ಹಕ್ಕುಗಳ ತತ್ತ್ವಶಾಸ್ತ್ರದಲ್ಲಿ ಅಪರಾಧಕ್ಕೆ ತಕ್ಕ ಶಿಕ್ಷೆ ಎಂಬ ಸೂತ್ರವಿದೆ. ಧಾರ್ಮಿಕ ಭಾವನೆಗೆ ಧಕ್ಕೆ ತಂದ ಪ್ರಕರಣಗಳಲ್ಲಿ ದಂಡ, ಜೈಲು ಶಿಕ್ಷೆ ಅಥವಾ ಸುಧಾರಣಾತ್ಮಕ ತಿದ್ದುಪಡಿ ಕ್ರಮಗಳನ್ನು ಕೈಗೊಳ್ಳಲು ಅವಕಾಶವಿರುತ್ತದೆ. ಅದನ್ನು ಬಿಟ್ಟು ಮರಣದಂಡನೆಯಂತಹ ಅಂತಿಮ ಶಿಕ್ಷೆ ವಿಧಿಸುವುದು ಮಾನವೀಯ ನೈತಿಕತೆಗೆ ಎಸಗುವ ಅನ್ಯಾಯ.

ಕ್ಷಮೆ, ಕರುಣೆ, ನ್ಯಾಯ, ಬಡವರ ಬಗ್ಗೆ ಕಾಳಜಿ ಮತ್ತು ಮಾನವ ಘನತೆಯಂತಹ ಮೌಲ್ಯಗಳನ್ನು ಸಾರಿದ್ದರು ಪ್ರವಾದಿ ಮೊಹಮ್ಮದ್. ತಪ್ಪು ಮಾಡಿದವರನ್ನು ತಿದ್ದುವುದು, ತಿದ್ದಿಕೊಳ್ಳಲು ಅವಕಾಶ ನೀಡುವುದು, ಅನ್ಯಾಯವನ್ನು ವಿರೋಧಿಸುವುದು ಮತ್ತು ದುರ್ಬಲರ ಪರವಾಗಿ ನಿಲ್ಲುವುದು ಅವರ ಬೋಧನೆಗಳ ಪ್ರಮುಖ ಭಾಗಗಳಾಗಿದ್ದವು. ಪ್ರವಾದಿಯವರ ಈ ಮಾನವೀಯ ಸಂದೇಶಗಳನ್ನು ಅರ್ಥಮಾಡಿಕೊಳ್ಳುವುದಕ್ಕೂ, ಧರ್ಮದ ಹೆಸರಿನಲ್ಲಿ ವಿಶೇಷವಾಗಿ ಇಸ್ಲಾಂ ರಾಷ್ಟ್ರಗಳಲ್ಲಿ ರೂಪುಗೊಂಡಿರುವ ಪ್ರತಿಯೊಂದು ಕಾನೂನನ್ನೂ ಪ್ರಶ್ನಾತೀತವಾಗಿ ಒಪ್ಪಿಕೊಳ್ಳುವುದಕ್ಕೂ ಬಹಳ ವ್ಯತ್ಯಾಸವಿದೆ. ಧಾರ್ಮಿಕ ಇತಿಹಾಸದಲ್ಲಿ ರೂಪುಗೊಂಡಿರುವ ಕಾನೂನುಗಳು, ಅವುಗಳ ವ್ಯಾಖ್ಯಾನಗಳು ಮತ್ತು ಅವುಗಳನ್ನು ಜಾರಿಗೊಳಿಸುವ ರಾಜಕೀಯ ವ್ಯವಸ್ಥೆಗಳನ್ನು ಪ್ರವಾದಿಯವರ ಅಸಲಿ ಬೋಧನೆಗಳೊಂದಿಗೆ ಒಂದೇ ಎಂದು ಸಮೀಕರಿಸುವುದು ಸರಿಯಲ್ಲ.

ಧಾರ್ಮಿಕ ಪಾವಿತ್ರ್ಯತೆಯ ಜತೆಗೆ ಮಾನವ ಜೀವದ ಪಾವಿತ್ರ್ಯವೂ ದೊಡ್ಡದು. ಯಾವುದೇ ಧರ್ಮದ ನಾಗರಿಕತೆಯ ಶ್ರೇಷ್ಠತೆಯನ್ನು ನಿರ್ಧರಿಸುವುದು ಅದು ಎಷ್ಟು ಕಠಿಣವಾಗಿ ಶಿಕ್ಷಿಸುತ್ತದೆ ಎಂಬುದರಿಂದಲ್ಲ, ಅದು ಎಷ್ಟು ನ್ಯಾಯಯುತವಾಗಿ ನಡೆದುಕೊಳ್ಳುತ್ತದೆ, ಎಷ್ಟು ಜೀವಗಳನ್ನು ರಕ್ಷಿಸುತ್ತದೆ, ಎಷ್ಟು ಮಾನವೀಯತೆಯನ್ನು ಉಳಿಸಿಕೊಳ್ಳುತ್ತದೆ ಎಂಬುದರಿಂದ. ಮಾನವ ಧರ್ಮವೆಂದರೆ ಇದೇ ಅಲ್ಲವೇ?

ಪದವೀಧರರು, ಶಿಕ್ಷಕರೇ ಗಮನಿಸಿ.. ಅ.23ರಂದು ಪ್ರಾಶಸ್ತ್ಯ ಮತ ಚಲಾಯಿಸುವಾಗ ಈ ತಪ್ಪು ಮಾಡಬೇಡಿ!

ಕರ್ನಾಟಕ ವಿಧಾನ ಪರಿಷತ್ತಿನ ಪದವೀಧರರ ಮತ್ತು ಶಿಕ್ಷಕರ ಕ್ಷೇತ್ರಗಳ ದ್ವೈವಾರ್ಷಿಕ ಚುನಾವಣೆ-2026ರ ಮತದಾನ ಅಕ್ಟೋಬರ್ 23ರಂದು ನಡೆಯಲಿದೆ. ಮತದಾರರು ತಮ್ಮ ಆಯ್ಕೆಯ ಅಭ್ಯರ್ಥಿಯನ್ನು ಆರಿಸಲು ಪ್ರಾಶಸ್ತ್ಯ ಮತದಾನ ಪದ್ಧತಿಯನ್ನು ಅನುಸರಿಸಬೇಕು. ಈ ಸಂದರ್ಭದಲ್ಲಿ ಮತಪತ್ರದಲ್ಲಿ ಪ್ರಾಶಸ್ತ್ಯಗಳನ್ನು ನಮೂದಿಸುವ ವಿಧಾನ, ಮತ ಅಸಿಂಧುಗೊಳ್ಳಲು ಕಾರಣವಾಗುವ ತಪ್ಪುಗಳು ಹಾಗೂ ಮತದಾನಕ್ಕೆ ಅಗತ್ಯವಿರುವ ಗುರುತಿನ ದಾಖಲೆಗಳ ಬಗ್ಗೆ ತಿಳಿದುಕೊಳ್ಳುವುದು ಮುಖ್ಯವಾಗಿದೆ.

ಮೊದಲ ಪ್ರಾಶಸ್ತ್ಯಕ್ಕೆ 1 ನಮೂದಿಸಿ

ಪದವೀಧರರ ಮತ್ತು ಶಿಕ್ಷಕರ ಕ್ಷೇತ್ರಗಳ ಚುನಾವಣೆಯಲ್ಲಿ ಮತದಾರರು ಮತಪತ್ರದಲ್ಲಿ ಅಭ್ಯರ್ಥಿಗಳ ಹೆಸರಿನ ಎದುರು ತಮ್ಮ ಆಯ್ಕೆಯ ಪ್ರಾಶಸ್ತ್ಯವನ್ನು ಅಂಕಿಗಳ ಮೂಲಕ ದಾಖಲಿಸಬೇಕು. ತಾವು ಮೊದಲಿಗೆ ಆಯ್ಕೆ ಮಾಡಲು ಬಯಸುವ ಅಭ್ಯರ್ಥಿಯ ಹೆಸರಿನ ಎದುರು 1 ಎಂದು ನಮೂದಿಸಬೇಕು. ಈ ಅಂಕಿಯನ್ನು ಒಬ್ಬ ಅಭ್ಯರ್ಥಿಯ ಹೆಸರಿನ ಎದುರು ಮಾತ್ರ ಬರೆಯಬೇಕು.

ಇತರ ಅಭ್ಯರ್ಥಿಗಳಿಗೆ ಪ್ರಾಶಸ್ತ್ಯ ನೀಡಲು ಬಯಸಿದರೆ, ಆಯ್ಕೆಯ ಕ್ರಮದಲ್ಲಿ 2, 3, 4 ಹೀಗೆ ನಮೂದಿಸಬಹುದು. ಎಲ್ಲ ಅಭ್ಯರ್ಥಿಗಳಿಗೂ ಪ್ರಾಶಸ್ತ್ಯ ನೀಡುವುದು ಕಡ್ಡಾಯವಲ್ಲ. ಆದರೆ ಮೊದಲ ಪ್ರಾಶಸ್ತ್ಯವನ್ನು ಸರಿಯಾಗಿ ದಾಖಲಿಸುವುದು ಅತ್ಯಗತ್ಯ.

ಪ್ರಾಶಸ್ತ್ಯಗಳನ್ನು ಅಂಕಿಗಳ ರೂಪದಲ್ಲಿಯೇ ಬರೆಯಬೇಕು. ಒಂದು, ಎರಡು, ಮೂರು ಎಂದು ಅಕ್ಷರಗಳಲ್ಲಿ ಬರೆಯಬಾರದು. ಅಂಕಿಗಳನ್ನು ಸ್ಪಷ್ಟವಾಗಿ ಬರೆಯಬೇಕು. ಮತಪತ್ರದಲ್ಲಿ ಮತದಾರರನ್ನು ಗುರುತಿಸಲು ಸಾಧ್ಯವಾಗುವಂತಹ ಸಹಿ, ಹೆಸರು, ಇನಿಷಿಯಲ್ ಅಥವಾ ಬೇರೆ ಯಾವುದೇ ಗುರುತನ್ನು ಹಾಕಬಾರದು.

ನೇರಳೆ ಬಣ್ಣದ ಸ್ಕೆಚ್ ಪೆನ್ ಮಾತ್ರ ಬಳಸಿ

ಮತದಾನ ಮಾಡುವಾಗ ಚುನಾವಣಾ ಸಿಬ್ಬಂದಿ ನೀಡುವ ನೇರಳೆ ಬಣ್ಣದ ಸ್ಕೆಚ್ ಪೆನ್ ಅನ್ನು ಮಾತ್ರ ಬಳಸಬೇಕು. ಸ್ವಂತ ಪೆನ್, ಪೆನ್ಸಿಲ್ ಅಥವಾ ಇತರ ಬರವಣಿಗೆ ಸಾಧನಗಳನ್ನು ಬಳಸಬಾರದು.

ಪ್ರಾಶಸ್ತ್ಯಗಳನ್ನು ನಮೂದಿಸಿದ ಬಳಿಕ ಮತಗಟ್ಟೆ ಸಿಬ್ಬಂದಿ ತಿಳಿಸಿದ ವಿಧಾನದಂತೆ ಮತಪತ್ರವನ್ನು ಮಡಚಿ, ನಿಗದಿಪಡಿಸಿದ ಮತಪೆಟ್ಟಿಗೆಯಲ್ಲಿ ಹಾಕಬೇಕು. ಮತದಾನ ಪ್ರಕ್ರಿಯೆಯ ಸಂದರ್ಭದಲ್ಲಿ ಸಿಬ್ಬಂದಿ ನೀಡುವ ಸೂಚನೆಗಳನ್ನು ಪಾಲಿಸಬೇಕು.

ಯಾವ ತಪ್ಪುಗಳಿಂದ ಮತ ಅಸಿಂಧುಗೊಳ್ಳಬಹುದು?

ಮತಪತ್ರದಲ್ಲಿ ಮೊದಲ ಪ್ರಾಶಸ್ತ್ಯವನ್ನು ನಮೂದಿಸದಿದ್ದರೆ ಮತ ಅಸಿಂಧುಗೊಳ್ಳಬಹುದು. ಒಂದಕ್ಕಿಂತ ಹೆಚ್ಚು ಅಭ್ಯರ್ಥಿಗಳ ಹೆಸರಿನ ಎದುರು 1 ಎಂದು ಬರೆದಿದ್ದರೂ



ಮತ ತಿರಸ್ಕೃತವಾಗುವ ಸಾಧ್ಯತೆಯಿದೆ. 1 ಯಾವ ಅಭ್ಯರ್ಥಿಗೆ ಅನ್ವಯಿಸುತ್ತದೆ ಎಂಬುದು ಸ್ಪಷ್ಟವಾಗದಿದ್ದರೂ ಮತದ ಮಾನ್ಯತೆಗೆ ತೊಂದರೆಯಾಗಬಹುದು.

ಅದೇ ರೀತಿ, ಒಬ್ಬ ಅಭ್ಯರ್ಥಿಯ ಹೆಸರಿನ ಎದುರು 1 ಮತ್ತು ಮತ್ತೊಂದು ಪ್ರಾಶಸ್ತ್ಯದ ಅಂಕಿಯನ್ನು ಒಟ್ಟಿಗೆ ನಮೂದಿಸುವುದು, ಮತದಾರರನ್ನು ಗುರುತಿಸಬಹುದಾದ ಗುರುತು ಹಾಕುವುದು ಅಥವಾ ಅನುಮತಿಸಲಾದ ಬರವಣಿಗೆ ಸಾಧನದ ಬದಲಿಗೆ ಬೇರೆ ಸಾಧನ ಬಳಸುವುದು ಮತ ಅಸಿಂಧುಗೊಳ್ಳಲು ಕಾರಣವಾಗಬಹುದು.

ಹೀಗಾಗಿ ಮತದಾರರು ಆತುರಪಡದೆ, ಮತಪತ್ರದಲ್ಲಿರುವ ಸೂಚನೆಗಳನ್ನು ಗಮನಿಸಿ, ಯಾವುದೇ ಗೊಂದಲವಿದ್ದರೆ ಮತ ಚಲಾಯಿಸುವ ಮುನ್ನ ಚುನಾವಣಾ ಸಿಬ್ಬಂದಿಯಿಂದ ವಿಧಾನವನ್ನು ತಿಳಿದುಕೊಳ್ಳಬೇಕು.

ಮತದಾರರ ಗುರುತಿನ ಚೀಟಿ ಇಲ್ಲದಿದ್ದರೆ ಏನು ಮಾಡಬೇಕು?

ಮತದಾರರ ಗುರುತಿನ ಚೀಟಿ ಇಲ್ಲದಿದ್ದರೂ, ಚುನಾವಣಾ ಆಯೋಗವು ಅನುಮತಿಸಿರುವ ಪರ್ಯಾಯ ಗುರುತಿನ ದಾಖಲೆಗಳಲ್ಲಿ ಯಾವುದಾದರೂ ಒಂದನ್ನು ಬಳಸಲು ಅವಕಾಶವಿರಬಹುದು. ಆದರೆ ಮತದಾರರ ಪಟ್ಟಿಯಲ್ಲಿ ಹೆಸರು ಇರುವುದು ಮುಖ್ಯವಾಗಿದ್ದು, ಗುರುತಿನ ದಾಖಲೆಯಾಗಿ ಯಾವ ದಾಖಲೆಗಳನ್ನು ಸ್ವೀಕರಿಸಲಾಗುತ್ತದೆ ಎಂಬುದನ್ನು ಸಂಬಂಧಿತ ಚುನಾವಣಾಧಿಕಾರಿಗಳಿಂದ ಖಚಿತಪಡಿಸಿಕೊಳ್ಳಬೇಕು.

ಪರ್ಯಾಯ ದಾಖಲೆಗಳ ಪಟ್ಟಿಯಲ್ಲಿ ಸಾಮಾನ್ಯವಾಗಿ ಆಧಾರ್ ಕಾರ್ಡ್, ಚಾಲನಾ ಪರವಾನಗಿ, ಪಾನ್ ಕಾರ್ಡ್, ಭಾರತೀಯ ಪಾಸ್‌ಪೋರ್ಟ್ ಹಾಗೂ ಸಂಬಂಧಿತ ಚುನಾವಣೆಗೆ ಅಧಿಕೃತವಾಗಿ ಅನುಮೋದಿಸಿರುವ ಇತರ ಭಾವಚಿತ್ರವಿರುವ ಗುರುತಿನ ದಾಖಲೆಗಳು ಸೇರಿರಬಹುದು. ಶಿಕ್ಷಕರು ಮತ್ತು ಪದವೀಧರರಿಗೆ ಸಂಬಂಧಿಸಿದ ಸೇವಾ ಗುರುತಿನ ಚೀಟಿಗಳು ಅಥವಾ ಶೈಕ್ಷಣಿಕ ದಾಖಲೆಗಳನ್ನು ಬಳಸುವ ಅವಕಾಶವಿದೆಯೇ ಎಂಬುದನ್ನು ಆಯಾ ಚುನಾವಣೆಯ ಅಧಿಕೃತ ಅಧಿಸೂಚನೆಯ ಆಧಾರದಲ್ಲಿ ಪರಿಶೀಲಿಸಬೇಕು. ಮತದಾರರು ಮತದಾನಕ್ಕೆ ತೆರಳುವ ಮೊದಲು ತಮ್ಮ ಹೆಸರು ಮತದಾರರ ಪಟ್ಟಿಯಲ್ಲಿದೆಯೇ ಮತ್ತು ಯಾವ ಗುರುತಿನ ದಾಖಲೆ ತರಬೇಕು ಎಂಬುದನ್ನು ಖಚಿತಪಡಿಸಿಕೊಳ್ಳುವುದು ಉತ್ತಮ.

ಅಕ್ಟೋಬರ್ 23ರಂದು ಬೆಳಗ್ಗೆ 8ರಿಂದ ಸಂಜೆ 4ರವರೆಗೆ ಮತದಾನ

ಕರ್ನಾಟಕ ವಿಧಾನ ಪರಿಷತ್ತಿನ 2026ರ ಪದವೀಧರರ ಮತ್ತು ಶಿಕ್ಷಕರ ಕ್ಷೇತ್ರಗಳ ಚುನಾವಣೆಗೆ ಅಕ್ಟೋಬರ್ 23ರಂದು ಬೆಳಗ್ಗೆ 8ರಿಂದ ಸಂಜೆ 4ರವರೆಗೆ ಮತದಾನ ನಡೆಯಲಿದೆ. ಮತ ಎಣಿಕೆ ಅಕ್ಟೋಬರ್ 27ರಂದು ನಡೆಯಲಿದೆ ಎಂದು ಚುನಾವಣಾ ಆಯೋಗ ತಿಳಿಸಿದೆ.

ಮತದಾರರು ನಿಗದಿತ ಸಮಯದೊಳಗೆ ಮತಗಟ್ಟೆಗೆ ತೆರಳಿ, ಅಗತ್ಯ ಗುರುತಿನ ದಾಖಲೆಯೊಂದಿಗೆ ತಮ್ಮ ಹಕ್ಕು ಚಲಾಯಿಸಬೇಕು. ಮತದಾನಕ್ಕೆ ಸಂಬಂಧಿಸಿದ ಇತ್ತೀಚಿನ ಸೂಚನೆಗಳಿಗಾಗಿ ಕರ್ನಾಟಕದ ಮುಖ್ಯ ಚುನಾವಣಾಧಿಕಾರಿಗಳ ಕಚೇರಿ ಅಥವಾ ಸಂಬಂಧಿತ ಜಿಲ್ಲಾ ಚುನಾವಣಾಧಿಕಾರಿಗಳ ಪ್ರಕಟಣೆಗಳನ್ನು ಪರಿಶೀಲಿಸಬಹುದು.

ಪ್ರಾಶಸ್ತ್ಯ ಮತದಾನ ಪದ್ಧತಿಯಲ್ಲಿ ಪ್ರತಿಯೊಂದು ಸೂಚನೆಯೂ ಮುಖ್ಯವಾಗಿದೆ. ಮೊದಲ ಪ್ರಾಶಸ್ತ್ಯವನ್ನು ಸರಿಯಾಗಿ ದಾಖಲಿಸಿ, ನಿಯಮಗಳನ್ನು ಪಾಲಿಸುವ ಮೂಲಕ ಮತ ಅಸಿಂಧುಗೊಳ್ಳದಂತೆ ಎಚ್ಚರಿಕೆ ವಹಿಸಬೇಕು.

ಪ್ರತಿಯೊಂದು ಮತವೂ ಅಮೂಲ್ಯ. ಮತದಾನದ ವಿಧಾನ ತಿಳಿದುಕೊಳ್ಳಿ, ತಪ್ಪುಗಳಿಗೆ ಅವಕಾಶ ನೀಡಬೇಡಿ, ಪ್ರಜಾಪ್ರಭುತ್ವದ ಬಲವರ್ಧನೆಗೆ ನಿಮ್ಮ ಕೊಡುಗೆ ನೀಡಿ.

ಬೆಂಗಳೂರು ಶಿಕ್ಷಕರ ಕ್ಷೇತ್ರ: ಪುಟ್ಟಣ್ಣ ಕಟ್ಟಿಕೊಂಡಿರುವ ಶಿಕ್ಷಕರ ಕೋಟೆ ಉರುಳಿಸುತ್ತಾರಾ ಎ.ಪಿ ರಂಗನಾಥ್?

ವಿಧಾನ ಪರಿಷತ್‌ನ 4 ಸ್ಥಾನಗಳಲ್ಲಿಅಕ್ಟೋಬರ್ 23ರ ಶುಕ್ರವಾರ ಚುನಾವಣೆ ನಡೆಯಲಿದೆ. ಈ ಚುನಾವಣೆಯಲ್ಲಿ ತೀವ್ರ ಕುತೂಹಲ ಕೆರಳಿಸಿರುವುದು- ಬೆಂಗಳೂರು ಶಿಕ್ಷಕರ ಕ್ಷೇತ್ರ. ಇಲ್ಲಿ ಕಾಂಗ್ರೆಸ್‌ನಿಂದ ಸ್ಪರ್ಧಿಸಿರುವ ಪುಟ್ಟಣ್ಣ ಮತ್ತು ಎನ್‌ಡಿಎ ಅಭ್ಯರ್ಥಿಯಾಗಿರುವ ಎ.ಪಿ ರಂಗನಾಥ್ ಅವರ ನಡುವೆ ತೀವ್ರ ಪೈಪೋಟಿ ಇದೆ. ಈ ಕಾಳಗ, ಪ್ರತಿಷ್ಠೆಯ ವಿಷಯವಾಗಿಯೂ ಹೊಮ್ಮಿದೆ. ಪುಟ್ಟಣ್ಣನವರು ಎಂಎಲ್‌ಸಿ ಚುನಾವಣೆಗಳಲ್ಲಿ ಸೋಲಿಲ್ಲದ ಸರದಾರರಾಗಿ ಉಳಿಯಬೇಕೆಂಬ ಹಠದಲ್ಲಿದ್ದರೆ, ಸೋಲುಗಳಿಂದ ಕಂಗಾಲಾಗಿರುವ ರಂಗನಾಥ್, ಪುಟಿದೇಳುವ ಹುಮ್ಮಸ್ಸಿನಲ್ಲಿದ್ದಾರೆ.

ಜೆಡಿಎಸ್ ಕಾನೂನು ಘಟಕದ ಎ.ಪಿ. ರಂಗನಾಥ್ ಅವರು ಈಗಾಗಲೇ ಎರಡು ಬಾರಿ ಪುಟ್ಟಣ್ಣನವರ ಎದುರು ನೆಲಕಚ್ಚಿದ್ದಾರೆ. ಈಗ ಮೂರನೇ ಸಲ ಎದುರಾಳಿಯಾಗಿ ನಿಂತಿದ್ದಾರೆ. ಆದರೆ ಇಲ್ಲಿ ಮುಖ್ಯವಾಗಿ ಕಾಣುವುದು ಪುಟ್ಟಣ್ಣನವರ ಹಿಡಿತ.

ಪುಟ್ಟಣ್ಣ ಅವರು ಸತತ ಐದು ಬಾರಿ ಬೆಂಗಳೂರು ಶಿಕ್ಷಕರ ಕ್ಷೇತ್ರದ ಪ್ರತಿನಿಧಿಯಾಗಿ ಆಯ್ಕೆಯಾಗಿ ಬಂದರೂ ಒಂದೇ ಪಕ್ಷದಿಂದ ಗೆದ್ದಿಲ್ಲ ಎಂಬುದು ಕುತೂಹಲಕಾರಿ ಸಂಗತಿ. ಅವರು ಜೆಡಿಎಸ್‌ನಿಂದ ಮೂರು ಬಾರಿ ಗೆದ್ದಿದ್ದರು. ನಂತರ ಬಿಜೆಪಿಗೆ ಬಂದರು. ಅಲ್ಲಿ ಒಮ್ಮೆ ಗೆದ್ದರು. ಆದರೆ, ಒಪಿಎಸ್ ಹೋರಾಟ ತೀವ್ರ ಸದ್ದು ಮಾಡಿದ್ದ ಸಂದರ್ಭದಲ್ಲಿ ಶಿಕ್ಷಕರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾಗ, ಒಂದೇ ಒಂದು ಉನ್ನತ ಮಟ್ಟದ ಸಭೆ ಮಾಡಿಸಲು ಸಾಧ್ಯವಾಗಲಿಲ್ಲವಲ್ಲ ಎಂದು ಬೇಸತ್ತು ರಾಜೀನಾಮೆ ನೀಡಿ ಬಿಜೆಪಿಯಿಂದ ಬರಬಂದರು. ಈ ರಾಜೀನಾಮೆ ನಡುವೆ, 2023ರ ವಿಧಾನಸಭೆ ಚುನಾವಣೆ ಎದುರಾಯಿತು. ರಾಜಾಜಿನಗರ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿದ ಪುಟ್ಟಣ್ಣ, ಬಿಜೆಪಿಯ ಸುರೇಶ್ ಕುಮಾರ್ ಎದುರು ಸೋಲು ಕಂಡರು. ಆದರೆ, ಬಳಿಕ, ವಿಧಾನ ಪರಿಷತ್ ಚುನಾವಣೆಯಲ್ಲಿ ಮತ್ತೆ ಅವರು ಕಾಂಗ್ರೆಸ್ ಅಭ್ಯರ್ಥಿಯಾಗಿ ಬೆಂಗಳೂರು ಶಿಕ್ಷಕರ ಕ್ಷೇತ್ರದಲ್ಲಿ ಸ್ಪರ್ಧಿಸಿದರು. ಈ ಹಿಂದೆ ಎದುರಾಳಿಯಾಗಿದ್ದ ಎ.ಪಿ. ರಂಗನಾಥ್ ಅವರು ಜೆಡಿಎಸ್-ಬಿಜೆಪಿ ಮೈತ್ರಿ ಅಭ್ಯರ್ಥಿಯಾಗಿದ್ದರು. ಎರಡು ಪಕ್ಷ ಒಂದಾದರೂ ಪುಟ್ಟಣ್ಣ ಅವರು ಕಡಿಮೆ ಅಂತರದಲ್ಲಿ (1,507 ಮತಗಳಿಂದ) ಗೆದ್ದುಬಂದರು. ಅಂದರೆ ಬೆಂಗಳೂರು ಶಿಕ್ಷಕರ ಕ್ಷೇತ್ರದಲ್ಲಿ ಪುಟ್ಟಣ್ಣನವರ ಶಕ್ತಿ ಪಕ್ಷಾತೀತವಾಗಿ ಸಾಬೀತಾಗಿದೆ.

ವಿದ್ಯಾರ್ಥಿ ಚಳವಳಿಗಳ ಮೂಲಕ ರಾಜಕಾರಣ ಪ್ರವೇಶಿಸಿದ ಪುಟ್ಟಣ್ಣ, ತಮ್ಮ ಎರಡೂವರೆ ದಶಕಗಳ ಸಾರ್ವಜನಿಕ ಜೀವನದಲ್ಲಿ ಪಕ್ಷಾತೀತವಾಗಿ ಬೆಂಬಲಿಸುವ ಶಿಕ್ಷಕ ವರ್ಗವನ್ನು ಬೆಳೆಸಿಕೊಂಡಿರುವುದು ಅವರ ದೊಡ್ಡ ಶಕ್ತಿ. ಖಾಸಗಿ ಶಿಕ್ಷಣ ಸಂಸ್ಥೆಗಳ ಮಾನ್ಯತೆ ನವೀಕರಣ, ರಾಜೀರಹಿತವಾಗಿ ಶಿಕ್ಷಕರ ಪರ ಹೋರಾಟ, ಯಾವುದೇ ಸಂದರ್ಭದಲ್ಲಿಯಾದರೂ ಸ್ಪಂದಿಸುವ ಗುಣಗಳಿಂದ ಪುಟ್ಟಣ್ಣ ಶಿಕ್ಷಕ ಬಳಗದಲ್ಲಿ ಮನೆಮಾತಾಗಿರುವುದು ನಿಜ. ಖಾಸಗಿ ಶಿಕ್ಷಕರಿಗೆ ಆರೋಗ್ಯ ವಿಮೆ ಮತ್ತು ಸರ್ಕಾರಿ ಶಿಕ್ಷಕರನ್ನು ಬೋಧಕೇತರ ಕೆಲಸಗಳಿಗೆ ಬಳಸದಂತೆ ಶಿಕ್ಷಕರ ರಕ್ಷಣಾ ಕಾಯ್ದೆ ಜಾರಿಗೆ ತರುತ್ತೇನೆ ಎಂಬುದು ಅವರ ಬಹುಮುಖ್ಯ ವಾಗ್ದಾನ. ಇದು ವರ್ಕೌಟ್ ಆಗುವ ಸಾಧ್ಯತೆಯೂ ಇದೆ.



ಪುಟ್ಟಣ್ಣನವರು ಮೇಲುಗೈ ಸಾಧಿಸಲು ಇರುವ ಮತ್ತೊಂದು ಅಂಶವೆಂದರೆ- ಕಾಂಗ್ರೆಸ್ ನಲ್ಲಾಗಿರುವ ನಾಯಕತ್ವ ಬದಲಾವಣೆ. ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿಯೇ ಒಕ್ಕಲಿಗರ ಪ್ರಾಬಲ್ಯದ ಬೆಂಗಳೂರು ಶಿಕ್ಷಣ ಕ್ಷೇತ್ರದಲ್ಲಿ ಪುಟ್ಟಣ್ಣನವರು, ಜೆಡಿಎಸ್-ಬಿಜೆಪಿ ಮೈತ್ರಿ ಅಭ್ಯರ್ಥಿಯನ್ನು ಸೋಲಿಸಿದ್ದರು. ಈಗ ಒಕ್ಕಲಿಗ ಸಮುದಾಯದ ಡಿ.ಕೆ. ಶಿವಕುಮಾರ್ ಮುಖ್ಯಮಂತ್ರಿ ಗದ್ದುಗೆ ಅಲಂಕರಿಸಿರುವುದರಿಂದ ಬೆಂಗಳೂರು ಭಾಗದ ಶಿಕ್ಷಕರು ಜಾತಿ ಲೆಕ್ಕಾಚಾರಗಳನ್ನು ಹಾಕಿ, ಅಧಿಕಾರ ಕೇಂದ್ರಿತವಾಗಿ ಯೋಚಿಸಿದರೆ ಪುಟ್ಟಣ್ಣನವರ ಗೆಲುವು ಮತ್ತೊಮ್ಮೆ ಗೆಲ್ಲಬಹುದಾದ ಸಾಧ್ಯತಗಳಿವೆ.

ಪುಟ್ಟಣ್ಣರ ಎದುರಾಳಿ ರಂಗನಾಥ್ ಅವರು ವಕೀಲಿ ವೃತ್ತಿಯ ಹಿನ್ನೆಲೆಯವರಾದರೂ, ಶಿಕ್ಷಕರ ಕ್ಷೇತ್ರದಲ್ಲಿ ಗೆಲ್ಲಲು ಶತಪ್ರಯತ್ನ ಮಾಡುತ್ತಿದ್ದಾರೆ. ಈಗಾಗಲೇ ಎರಡು ಬಾರಿ ಸೋತಿರುವ ರಂಗನಾಥ್ ಅವರು ಚುನಾವಣಾ ಪ್ರಚಾರ ಸಭೆಯೊಂದರಲ್ಲಿ ಭಾವುಕರಾಗಿ ಕಣ್ಣೀರು ಹಾಕಿದ್ದಾರೆ. ಆ ಮೂಲಕ ಅನುಕಂಪ ಗಿಟ್ಟಿಸಿಕೊಳ್ಳುವ ಸಾಧ್ಯತೆಯೂ ಇದೆ. ''ಸತತ ಪುಟ್ಟಣ್ಣನವರನ್ನು ಗೆಲ್ಲಿಸಿದ್ದೇವೆ, ಈಗ ಎಪಿ ರಂಗನಾಥ್ ಅವರಿಗೆ ಒಂದು ಚಾನ್ಸ್ ಕೊಡಬೇಕು'' ಎಂದು ಕ್ಷೇತ್ರದ ಶಿಕ್ಷಕರು ಯೋಚಿಸಿದರೆ, ಪುಟ್ಟಣ್ಣನವರಿಗೆ ಹಿನ್ನಡೆಯಾಗುತ್ತದೆ.

ಪುಟ್ಟಣ್ಣರನ್ನು ಮಣಿಸಲೇಬೇಕು ಎಂದು ಹಠಕ್ಕೆ ಬಿದ್ದಿರುವ ರಂಗನಾಥ್ ಅವರು ಎಲ್ಲ ಅಸ್ತ್ರಗಳನ್ನು ಝಳುಪಿಸುತ್ತಿದ್ದಾರೆ. ''ಪುಟ್ಟಣ್ಣನವರಿಗೆ ವೋಟ್ ಹಾಕುವುದು ವ್ಯರ್ಥ. ಅವರು ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ರಾಜಾಜಿನಗರದ ಟಿಕೆಟ್ ಪಡೆದು ಹೋಗುತ್ತಾರೆ'' ಎಂಬ ಬಾಣವನ್ನು ಪ್ರಯೋಗಿಸಿದ್ದಾರೆ. ಇದಕ್ಕೆ ಪುಟ್ಟಣ್ಣ, ''ಇಂತಹ ಅಪಪ್ರಚಾರಗಳಿಗೆ ಒಳಗಾಗಬೇಡಿ, ಶಿಕ್ಷಕರು ನನ್ನ ಕುಟುಂಬ. 2023ರ ಅವಧಿಯಲ್ಲಿ ನಾನು ಎಂಎಲ್ಸಿ ಸ್ಥಾನಕ್ಕೆ ರಾಜೀನಾಮೆ ನೀಡಿದ್ದೆ. ಆಗ ಕಾಂಗ್ರೆಸ್ ನಾಯಕರಾದ ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಅವರು, ರಾಜಾಜಿನಗರಕ್ಕೆ ನಿಲ್ಲುವಂತೆ ಸೂಚಿಸಿದ್ದರಿಂದ ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧಿಸಿದ್ದೆ. ಆದರೆ ಶಿಕ್ಷಕರ ಕ್ಷೇತ್ರಕ್ಕೆ ಮರಳಿದಾಗ ನನ್ನನ್ನು ಗೆಲ್ಲಿಸಿದರು. ನಾನು ಮತ್ತೆ ರಾಜಾಜಿನಗರಕ್ಕೆ ಹೋಗುತ್ತೇನೆ ಎಂಬುದು ಶುದ್ಧಸುಳ್ಳು. ಹೀಗೆ ಹೇಳಿಕೆ ನೀಡುವ ಎದುರಾಳಿ ಅಭ್ಯರ್ಥಿಯು, ಈ ಚುನಾವಣೆ ಮುಗಿದ ಮೇಲೆ ಬಾರ್ ಕೌನ್ಸಿಲ್‌ಗೆ ಹೋಗುವುದಿಲ್ಲವೇ?'' ಎಂದು ಪ್ರಶ್ನಿಸಿದ್ದಾರೆ.

''ಪುಟ್ಟಣ್ಣ ಹಣದ ಹೊಳೆಯನ್ನೇ ಹರಿಸುತ್ತಿದ್ದಾರೆ, ಅವರು ಶಿಕ್ಷಕರಿಗೆ ಕೂಪನ್ ಹಂಚಿಕೆ ಮಾಡುತ್ತಿದ್ದಾರೆ'' ಎಂದು ಆರೋಪಿಸಿರುವ ರಂಗನಾಥ್, ಚುನಾವನಾ ಆಯೋಗಕ್ಕೂ ದೂರು ಸಲ್ಲಿಸಿದ್ದಾರೆ. ಆದರೆ ಪುಟ್ಟಣ್ಣ ಇದ್ಯಾವುಕ್ಕೂ ಹೆಚ್ಚು ಗಮನ ಕೊಟ್ಟಂತೆಯೂ ಕಾಣುತ್ತಿಲ್ಲ.

ಎ.ಪಿ. ರಂಗನಾಥ್ ಅವರು ಹಾಕಿರುವ ಕಣ್ಣೀರಿನ ಬಗ್ಗೆ ಪುಟ್ಟಣ್ಣನವರಿಗೆ ಆತಂಕವಿದ್ದಂತೆಯೂ ಕಾಣುತ್ತದೆ. ಹೀಗಾಗಿ, ''ನನ್ನ ವಿರುದ್ಧ ನಡೆಯುವ ಅಪಪ್ರಚಾರಗಳಿಗೆ ಕಿವಿಗೊಡಬೇಡಿ. ಐದು ಬಾರಿ ಆಯ್ಕೆಯಾಗಿರುವ ನನ್ನ ವಿರುದ್ಧ ಯಾವುದಾದರೂ ಆರೋಪಗಳಿದ್ದರೆ ತೋರಿಸಿ ಗೆಲ್ಲಬೇಕೇ ಹೊರತು, ಕಣ್ಣೀರು ಹಾಕಿದರೆ ಪ್ರಯೋಜನವಿಲ್ಲ. ಶಿಕ್ಷಕ ಮತದಾರರು ಇಂತಹ ವಿಚಾರಗಳಿಗೆ ಗಮನ ಕೊಡುವುದಿಲ್ಲ'' ಎಂದು ದಾಳ ಉರುಳಿಸಿದ್ದಾರೆ. ಆದರೆ ಇದು ಎಷ್ಟರ ಮಟ್ಟಿಗೆ ಪ್ರತಿಫಲ ನೀಡುತ್ತದೆ ಎಂದು ನೋಡಬೇಕು.

ಬೆಂಗಳೂರು ಶಿಕ್ಷಕರ ಕ್ಷೇತ್ರ, ಪುಟ್ಟಣ್ಣವರ ಭದ್ರಕೋಟೆ ಎಂಬುದು ಸತ್ಯ. ಆದರೆ ಈ ಕೋಟೆಯನ್ನು ಎ.ಪಿ.ರಂಗನಾಥ್ ಛಿದ್ರಗೊಳಿಸಿದರೆ, ಅದು ಡಿ.ಕೆ.ಶಿವಕುಮಾರ್ ನೇತೃತ್ವದ ಕಾಂಗ್ರೆಸ್ ಸರ್ಕಾರಕ್ಕೆ ಎಚ್ಚರಿಕೆಯ ಕರೆಘಂಟೆಯಾಗುತ್ತದೆ.

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR